# ದಯಾಮರಣ: ಸಾವಿನ ನಿರೀಕ್ಷೆಯ ಮೌನ ಆಕ್ರಂದನ!

**■ 13 ದೀರ್ಘ ವರ್ಷಗಳಿಂದ ಕೋಮಾ ಸ್ಥಿತಿಯಲ್ಲಿದ್ದ ಗಾಜಿಯಾಬಾದ್‌ನ ಹರೀಶ್ ರಾಣಾ ಎಂಬುವರ ದಯಾಮರಣಕ್ಕೆ ಸುಪ್ರೀಂಕೋರ್ಟ್ ಇತ್ತೀಚೆಗೆ ಅನುಮತಿ ನೀಡಿತು. ಭಾರತದಲ್ಲಿ ಈ ರೀತಿ ದಯಾಮರಣ ಪಡೆದ ಮೊದಲ ಪ್ರಕರಣವಿದು. ಹೀಗೆ ದಯಾ ಮರಣಕ್ಕೆ ಅನುಮತಿ ಪಡೆದು ಮೊನ್ನೆ ಮಂಗಳವಾರ ಹೊಸದಿಲ್ಲಿಯ ಏಮ್ಸ್ ಆಸ್ಪತ್ರೆಯಲ್ಲಿ ಹರೀಶ್ ರಾಣಾ ಕೊನೆಯುಸಿರೆಳೆದರು. ದೇಶಾದ್ಯಂತ ಚರ್ಚೆಗೆ ಗ್ರಾಸವಾಗಿ ಸಂಚಲನ ಮೂಡಿಸಿದ ಈ ವಿಷಯದ ಕುರಿತು ಒಂದಿಷ್ಟು ವಿವರಗಳು ಇಲ್ಲಿವೆ. ಅಂದು ರಕ್ಷಾಬಂಧನ, ತಾರೀಕು ಆಗಸ್ಟ್ 20, 2013. ದೆಹಲಿ ಮೂಲದ ಹರೀಶ್ ರಾಣಾ ಚಂಡೀಗಢದ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನ ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿ.**

ಸಾವು-ನೋವು ತನ್ನ ಬದುಕಿನ ದಾರಿ ಸುಗಮಗೊಳಿಸುವ ನೆಪ ಮಾಡಿಕೊಂಡು, ಒಬ್ಬ ಮತ್ತೊಬ್ಬನನ್ನು ಸಾಯಿಸಲು ಕಾರಣ-ನೆಪ ಹುಡುಕುವ ಘಟನೆಗಳನ್ನು ಕಾಲಾಂತರದಲ್ಲಿ ಈ ಜಗತ್ತು ನೋಡಿದೆ! ಶಾಂತಿ ಸ್ಥಾಪನೆ, ಸ್ಥಳೀಯ ಜನರ ಸುರಕ್ಷತೆ ಮುಂತಾದ ಹೆಸರಿನಲ್ಲಿ ಅಮೆರಿಕ, ರಷ್ಯಾ ಮುಂತಾದ ದೇಶಗಳು ನಡೆಸುತ್ತಿರುವ ನರಮೇಧಗಳೂ ನಮ್ಮ ಕಣ್ಣೆದುರು ಇವೆ. ಹೀಗೆ ಸಾಯಿಸುವುದಕ್ಕೆ ನೂರಾರು ಕಾರಣಗಳು, ಸಾವಿರಾರು ಸಮರ್ಥನೆಗಳು.

ಇವೆಲ್ಲವೂ ತಂತಮ್ಮ ಮೂಗಿನ ನೇರಕ್ಕೆ ಮಾತ್ರ ಸರಿ ತೋರುವ ವಿಚಾರಗಳು-ಲೋಕದ ದೃಷ್ಟಿಯಲ್ಲಿ ಇಂತಹವೆಲ್ಲವೂ ಜನರ ಮಾರಣ ಹೋಮ, ಮರಣ ಶಾಸನ, ಅಷ್ಟೇ!

ನೇರ ವಿಷಯಕ್ಕೆ ಬರುತ್ತೇನೆ. ಇದೆಲ್ಲದರ ವಿರಹಿತವಾದ, ಕಾನೂನಿನ ಮಾನ್ಯತೆ ಪಡೆದು, ದೀರ್ಘ ಅನಾರೋಗ್ಯದ ಕಾರಣದಿಂದಾಗಿ, ಹಂತಹಂತವಾಗಿ ರೋಗಿಯೊಬ್ಬನ ಜೀವ ತೆಗೆಯುವ ಪ್ರಕ್ರಿಯೆಯ ಹೆಸರು ದಯಾಮರಣ! ಸಂತ್ರಸ್ತರೊಬ್ಬರು ಜೀವಚ್ಛವವಾಗಿ ಬದುಕಿರುವುದಕ್ಕಿಂತ ಸಾವೇ ಸಾವಿರ ಪಾಲು ಲೇಸು ಎಂಬ ತೀರ್ಮಾನಕ್ಕೆ ಅನಾರೋಗ್ಯ ಪೀಡಿತರ ಪರಿವಾರದವರು ಬಂದು, ಅದನ್ನು ಕಾನೂನು ರೀತಿಯಲ್ಲಿ ದೃಢೀಕರಿಸಿ, ಆ ಮೂಲಕ ಅನಾರೋಗ್ಯ ಪೀಡಿತನ ಕಷ್ಟವನ್ನು ಪರಿಹರಿಸುವ ಪ್ರಕ್ರಿಯೆ ಈ ದಯಾಮರಣ.

13 ದೀರ್ಘ ವರ್ಷಗಳಿಂದ ಕೋಮಾ ಸ್ಥಿತಿಯಲ್ಲಿದ್ದ ಗಾಜಿಯಾಬಾದ್‌ನ ಹರೀಶ್ ರಾಣಾ ಎಂಬವರ ದಯಾಮರಣಕ್ಕೆ ಸುಪ್ರೀಂಕೋರ್ಟ್ ಇತ್ತೀಚೆಗೆ ಅನುಮತಿ ನೀಡಿತು. ಭಾರತದಲ್ಲಿ ಈ ರೀತಿ ದಯಾಮರಣ ಪಡೆದ ಮೊದಲ ಪ್ರಕರಣವಿದು. ಹೀಗೆ ದಯಾ ಮರಣಕ್ಕೆ ಅನುಮತಿ ಪಡೆದು ಮೊನ್ನೆ ಮಂಗಳವಾರ ಹೊಸದಿಲ್ಲಿಯ ಏಮ್ಸ್ ಆಸ್ಪತ್ರೆಯಲ್ಲಿ ಹರೀಶ್ ರಾಣಾ ಕೊನೆಯುಸಿರೆಳೆದರು.


ದೇಶಾದ್ಯಂತ ಚರ್ಚೆಗೆ ಗ್ರಾಸವಾಗಿ ಸಂಚಲನ ಮೂಡಿಸಿದ ಈ ವಿಷಯದ ಕುರಿತು ಒಂದಿಷ್ಟು ವಿವರಗಳು ಇಲ್ಲಿವೆ. ಅಂದು ರಕ್ಷಾಬಂಧನ, ತಾರೀಕು ಆಗಸ್ಟ್ 20, 2013. ದೆಹಲಿ ಮೂಲದ ಹರೀಶ್ ರಾಣಾ ಚಂಡೀಗಢದ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನ ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿ. ವಾಸವಿದ್ದ ಹಾಸ್ಟೆಲ್‌ನ ನಾಲ್ಕನೆಯ ಮಹಡಿಯಿಂದ ಆಕಸ್ಮಿಕವಾಗಿ ಕೆಳಗೆ ಬಿದ್ದ ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ, ಕೋಮಾಕ್ಕೆ ಜಾರಿ ಸಂಪೂರ್ಣ ದೈಹಿಕ ಅಂಗವೈಕಲ್ಯಕ್ಕೆ ತುತ್ತಾದರು.

ಕಳೆದ 13 ವರ್ಷಗಳಿಂದ ಹರೀಶ್ ರಾಣಾ ಉಸಿರಾಟಕ್ಕಾಗಿ ಟ್ರಾಕಿಯೊಸ್ಟೊಮಿ ಟ್ಯೂಬ್ ಮತ್ತು ಆಹಾರ ಸೇವನೆಗಾಗಿ ಗ್ಯಾಸ್ಟ್ರೋಜೆನೊಸ್ಟೊಮಿ ಟ್ಯೂಬನ್ನು ಅವಲಂಬಿಸಿ, ಹಾಸಿಗೆಗೆ ಸೀಮಿತವಾಗಿ ಜೀವಂತ ಶವದಂತೆ ಬದುಕುತ್ತಿದ್ದರು. ಅವರಿಗೆ, ಪೋಷಕರಿಗೆ ಮತ್ತು ಮನೆಯವರಿಗೆ ನಿತ್ಯ ನರಕಯಾತನೆ!

ಇಂದಲ್ಲ ನಾಳೆ ಮಗನ ಆರೋಗ್ಯ ಸುಧಾರಿಸಬಹುದು ಎಂದು ಆಶಾಭಾವನೆ ಹೊತ್ತು ಆತನ ಆರೈಕೆ ಮಾಡಲು ಸರ್ವಸ್ವವನ್ನೂ ತ್ಯಾಗ ಮಾಡಿದ ಆ ಹೆತ್ತವರ ಮಹದಾಸೆ ಪೂರೈಸಲೇ ಇಲ್ಲವಲ್ಲ. ಇಷ್ಟು ವರ್ಷ ಕಳೆದರೂ ಮಗನ ಆರೋಗ್ಯದಲ್ಲಿ ಯಾವುದೇ ಚೇತರಿಕೆ ಇಲ್ಲ. ಹೀಗೆ ದಿನಾಲೂ ನರಕ ಅನುಭವಿಸಿದ ಹೆತ್ತವರು ಆತನ ಸಂಕಟ ನೋಡಲಾಗದೆ ಆತನಿಗೆ ದಯಾ ಮರಣ ಪಾಲಿಸುವಂತೆ ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದರು.

ದಯಾಮರಣದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಆ ಅರ್ಜಿಯನ್ನು ವಜಾ ಗೊಳಿಸಿತು. ಈ ಆಘಾತದ ನಂತರ ಹೆತ್ತವರು ಮಗನ ನರಕಸದೃಶ ಜೀವನ ಕೊನೆ ಗೊಳಿಸುವ ಅಂತಿಮ ಪ್ರಯತ್ನವಾಗಿ ಸುಪ್ರೀಂಕೋರ್ಟ್ ಕದ ತಟ್ಟಿದರು. ಹಲವಾರು ತಿಂಗಳುಗಳ ದೀರ್ಘ ವಿಚಾರಣೆ, ವಿವೇಚನೆ ಮತ್ತು ವಿವಿಧ ದೃಷ್ಟಿಕೋನಗಳಿಂದ ಈ ಸೂಕ್ಷ್ಮ ವಿಚಾರವನ್ನು ಪರಿಶೀಲಿಸಿದ ನ್ಯಾಯಾಲಯ ಅಂತಿಮವಾಗಿ ನಿಷ್ಕ್ರಿಯ ದಯಾಮರಣ ಮೂಲಭೂತ ಹಕ್ಕು ಎಂದು ಗುರುತಿಸಿತು.

2018ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ಮಹತ್ವದ ನಿಷ್ಕ್ರಿಯ ದಯಾಮರಣ ತೀರ್ಪನ್ನು ಕಾನೂನುಬದ್ಧಗೊಳಿಸಿ, ಘನತೆ-ಗೌರವದಿಂದ ಸಾಯುವ ಹಕ್ಕು ಉಲ್ಲೇಖಿಸಿ ಈ ಸಂಚಲನ ಭರಿತ ತೀರ್ಪು ನೀಡಿತು. ಹೀಗೆ ಆ ಕಾನೂನಿನಡಿಯಲ್ಲಿ ದಯಾಮರಣ ಪಡೆದ ಮೊದಲ ವ್ಯಕ್ತಿ ಹರೀಶ್ ರಾಣಾ. ನ್ಯಾಯದಾನದ ಇತಿಹಾಸದಲ್ಲಿ ಕಾನೂನಿನ ಚೌಕಟ್ಟು ಮೀರಿ, ಮಾನವೀಯ ಸಂವೇದನೆಗಳ ಪರಾಕಾಷ್ಠೆಯ ದ್ಯೋತಕವಾಗಿ ಈ ಪ್ರಕರಣ ಚರಿತ್ರೆಯಲ್ಲಿ ದಾಖಲಾಯಿತು!



ಮಗನ ಸಾವಿಗಾಗಿ ಹೆತ್ತವರು ಅಂಗಲಾಚುವ ವಿಷಣ್ಣ ಸನ್ನಿವೇಶವನ್ನು ಊಹಿಸಿಕೊಳ್ಳಲೂ ಕಷ್ಟ! ನ್ಯಾಯಮೂರ್ತಿಗಳಾದ ಪಾರ್ದಿವಾಲಾ ಮತ್ತು ವಿಶ್ವನಾಥನ್ ಅವರ ನ್ಯಾಯಪೀಠವು ಈ ದಯಾಮರಣ ಕೋರಿಕೆ ಪ್ರಕರಣವನ್ನು ತುಂಬಾ ಸೂಕ್ಷ್ಮವಾಗಿ ಪರಿಶೀಲಿಸಿತು.

ಅರ್ಜಿ ವಿಚಾರಣೆ ಸಂದರ್ಭದಲ್ಲಿ ಇಲ್ಲಿ ಪ್ರಶ್ನೆ ಇರುವುದು ರೋಗಿಯ ಸಾವಿನಲ್ಲಿ ಯಾರಿಗಾದರೂ ಹಿತಾಸಕ್ತಿ ಇದೆಯೇ ಎಂಬುದಾಗಿ ಅಲ್ಲ. ಬದಲಿಗೆ ರೋಗಿಯ ಜೀವ ಉಳಿಸುವ ಚಿಕಿತ್ಸೆಯನ್ನು ಇನ್ನೂ ಮುಂದುವರಿಸುವುದರಿಂದ ರೋಗಿಗೆ ಏನಾದರೂ ಪ್ರಯೋಜನ ಇದೆಯೇ? ಎಂದು ಪೀಠ ಪ್ರಶ್ನಿಸಿತು. ಅದಕ್ಕೆ ಯಾರ ಬಳಿಯೂ ಸಮರ್ಪಕ-ನಿಖರ ಉತ್ತರ ಇಲ್ಲದಿದ್ದರೂ ವೈದ್ಯಕೀಯ ವರದಿಗಳ ಪ್ರಕಾರ ರಾಣಾ ಚೇತರಿಕೆಯ ಸಾಧ್ಯತೆ ಶೂನ್ಯವಾಗಿತ್ತು - ಇಂದಲ್ಲ ನಾಳೆ ಮಗ ಹುಷಾರಾಗುತ್ತಾನೆ ಎನ್ನುವ ಹರೀಶ್ ರಾಣಾ ಹೆತ್ತವರ ಆಶಾಭಾವನೆಯ ಹಾಗೆ!

ಉಜ್ವಲ ಭವಿಷ್ಯ ಇರುವ ಹುಡುಗ 13 ವರ್ಷಗಳಿಂದ ಹಾಸಿಗೆ ಹಿಡಿದು ವೃದ್ಧ ಪೋಷಕರ ಮೇಲೆ ಅವಲಂಬಿತನಾಗಿದ್ದಾನೆ. ಅವರು ಸುದೀರ್ಘ ಕಾಲ ನಡೆಸಿದ ಹೋರಾಟ ಬೆಲೆಕಟ್ಟಲಾಗದ್ದು. ವೈದ್ಯಕೀಯ ಮಂಡಳಿಯ ವಿಸ್ತೃತ ವರದಿ ಮತ್ತು ಶಿಫಾರಸಿನ ಮೇರೆಗೆ ಜೀವರಕ್ಷಕ ಸಾಧನಗಳನ್ನು ಹಿಂಪಡೆಯಲು ಅನುಮತಿ ನೀಡಲಾಯಿತು.

ತೀರ್ಪು ಓದಿದ ನ್ಯಾಯಮೂರ್ತಿ ಪಾರ್ದಿವಾಲಾ ಅವರು ಈ ಪ್ರಕರಣವು ನಮ್ಮೆಲ್ಲರನ್ನೂ ತೀವ್ರ ದುಃಖಕ್ಕೆ ದೂಡಿದೆ ಎಂದು ಹೇಳಿ ಭಾವುಕರಾದರು! ತೀವ್ರ ನೋವಿನಲ್ಲಿದ್ದ ಪೋಷಕರ ಸ್ಥಿತಿ ಮತ್ತು ಹರೀಶ್ ರಾಣಾರ ದುರಂತಮಯ ಬದುಕನ್ನು ನೆನೆದು ಪಾರ್ದಿ ವಾಲಾ ಕಂಗಳು ತೇವಗೊಂಡವು. ತೀರ್ಪು ಓದುವಾಗ ನ್ಯಾಯಾಧೀಶರು ಬಹಿರಂಗವಾಗಿ ಕಣ್ಣೀರು ಹಾಕಿದ ಹೃದಯಸ್ಪರ್ಶಿ ಘಟನೆಯೊಂದು ಭಾರತದ ನ್ಯಾಯಾಂಗದಲ್ಲಿ ದಾಖಲಿಸಲ್ಪಟ್ಟಿತು!

ಸುಪ್ರೀಂ ಕೋರ್ಟ್ ದಯಾಮರಣ ಕರುಣಿಸಿದ ಸುದ್ದಿಯು ಹರೀಶ್ ರಾಣಾ ಮತ್ತವರ ಕುಟುಂಬ ವಾಸಿಸುವ ಗಾಜಿಯಾಬಾದ್ ನ ರಾಜ್ ಎಂಪೈರ್ ಸೊಸೈಟಿ ಪರಿಸರದಲ್ಲಿ ಭಾರೀ ಭಾವನಾತ್ಮಕ ವಾತಾವರಣ, ಸನ್ನಿವೇಶ ಸೃಷ್ಟಿಸಿತು. ದಯಾಮರಣದ ಕೋರಿಕೆ ಸಲ್ಲಿಸಿ ಅದು ಪ್ರಾಪ್ತಿಯಾದಾಗ ಸಂಭ್ರಮಿಸಬೇಕೋ, ಮಗನನ್ನು ಕಳೆದುಕೊಳ್ಳುವ ವಿಚಾರದಲ್ಲಿ ಸಂಕಟಪಡಬೇಕೋ ಎಂದು ತಿಳಿಯದಂತಾದ ವಿಷಣ್ಣ ಪರಿಸ್ಥಿತಿ ಪೋಷಕರು ಮತ್ತು ಈ ವಿಷಯ ಕೇಳಿಸಿಕೊಂಡ ಪ್ರತಿಯೊಬ್ಬರದ್ದೂ!

ವರ್ಷಗಳಿಂದಲೂ ಹರೀಶ್ ರಾಣಾ ಆರೋಗ್ಯಕ್ಕಾಗಿ ಪ್ರಯತ್ನಿಸಿದ ಮತ್ತು ಪ್ರಾರ್ಥಿಸಿದ ಮನೆಯವರು, ನೆರೆಹೊರೆಯವರು, ಸ್ನೇಹಿತರು, ಹಿತೈಷಿಗಳು, ಸಂಬಂಧಿಕರು ಈ ಸುದ್ದಿ ಕೇಳಿ ಮೌನವಾದರು. ಆ ಕ್ಷಣಕ್ಕೆ ಅವರೆಲ್ಲರ ಪರಿಸ್ಥಿತಿ ಹರೀಶ್ ಆರೋಗ್ಯ ಸ್ಥಿತಿಗಿಂತ ಭಿನ್ನವಾಗಿರಲಿಲ್ಲ!

ತಂದೆ ಅಶೋಕ್ ರಾಣಾ ಅವರು ತಮ್ಮ ನೋವನ್ನು ಮರೆಮಾಚಲು ಯತ್ನಿಸಿದರೂ ಅವರ ಮುಖದಲ್ಲಿ ದುಗುಡ, ದುಃಖ ಸ್ಪಷ್ಟವಾಗಿ ಕಾಣಿಸುತ್ತಿತ್ತು. ನಮ್ಮ ಮನೆ ಮಗ ನಮ್ಮೆಲ್ಲರನ್ನೂ ಬಿಟ್ಟು ಹೋಗುತ್ತಿದ್ದಾನೆ. ಅವನಿಗೆ ಗೌರವಯುತ ಸಾವು ದೊರಕಿಸಲು ಸಾಧ್ಯವಾಗಿರುವುದು ಮಾತ್ರ ನಮಗೆ ಸ್ವಲ್ಪ ಸಮಾಧಾನ ನೀಡುತ್ತಿದೆ ಎನ್ನುವಾಗ ಕಣ್ಣೀರು ಗಲ್ಲದ ಮೇಲಿನಿಂದ ಜಾರುತ್ತಿತ್ತು.

ಬದುಕು ಕ್ರೂರ ಅನ್ನಿಸುವುದು ಇಂಥಾ ಸಂದರ್ಭಗಳ! ದಯಾಮರಣ ವಿಚಾರದಲ್ಲಿ ಅರುಣಾ ಶಾನುಭಾಗ್ ಹೆಸರಿನ ಹುಡುಗಿ/ಮಹಿಳೆಯ ದುರಂತ ಕತೆಯನ್ನು ಹೇಳಲೇಬೇಕು! ಮುಂಬೈನ ಆಸ್ಪತ್ರೆಯೊಂದರಲ್ಲಿ ನರ್ಸ್ ಆಗಿದ್ದ ಅರುಣಾ ಮೇಲೆ ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದವನೊಬ್ಬ 1973ರ ನವೆಂಬರ್ 27ರಂದು ಹ-ಅತ್ಯಾಚಾರ ಮಾಡಿದ ಪರಿಣಾಮ ಮೆದುಳಿಗೆ ಆಮ್ಲಜನಕ ಪೂರೈಕೆ ಸ್ಥಗಿತಗೊಂಡು ಅರುಣಾ ಕೋಮಾಗೆ ಜಾರಿದರು.

ಅರುಣಾ ಸೇವೆ ಸಲ್ಲಿಸಿದ ಆಸ್ಪತ್ರೆಯ ದಾದಿಯರು ಮತ್ತು ಸಿಬ್ಬಂದಿ ಬರೋಬ್ಬರಿ ನಾಲ್ಕು ದಶಕಗಳ ಕಾಲ ಅರುಣಾರ ಆರೈಕೆ, ಶುಶ್ರೂಷೆ ಮಾಡಿದರು. 2009ರಲ್ಲಿ ಪತ್ರಕರ್ತೆ ಪಿಂಕಿ ಇರಾನಿಯವರು ಅರುಣಾರ ದಯನೀಯ ಸ್ಥಿತಿ ಕಂಡು ದಯಾಮರಣ ಕೋರಿ ಕೋರ್ಟಿಗೆ ಅರ್ಜಿ ಸಲ್ಲಿಸಿದರು.

ವರ್ಷಗಳ ಕಾಲ ಅರುಣಾ ಅವರನ್ನು ಆರೈಕೆ ಮಾಡಿದ ಆಸ್ಪತ್ರೆಯ ಸಿಬ್ಬಂದಿ ಅರುಣಾ ಇನ್ನಷ್ಟು ದಿನ ಬದುಕಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದುದರಿಂದ ಈ ದಯಾಮರಣ ಅರ್ಜಿಯನ್ನು 2011ರ ಮಾರ್ಚ್ 7ರಂದು ಸುಪ್ರೀಂ ಕೋರ್ಟ್ ತಿರಸ್ಕರಿಸಿತು. ಜೊತೆಗೆ ದಯಾಮರಣಕ್ಕೆ ಸಂಬಂಧಿಸಿದಂತೆ ವಿವರವಾದ ಕಾನೂನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಫರ್ಮಾನು ಹೊರಡಿಸಿತು. 42 ವರ್ಷಗಳ ಕಾಲ ಕೋಮಾದಲ್ಲಿದ್ದ ಅರುಣಾ ಶಾನುಭಾಗ್ ನ್ಯುಮೋನಿಯಾ ರೋಗಕ್ಕೆ ತುತ್ತಾಗಿ 2015ರ ಮೇ 08ರಂದು ಕೊನೆಗೂ ನಿಧನರಾಗಿ, ಹೇಳಿಕೊಳ್ಳಲಾಗದ ತಮ್ಮ ನೋವಿನಿಂದ ಮುಕ್ತಿ ಪಡೆದರು!

**ದಯಾಮರಣ ಕಾನೂನು:** ದಯಾ ಮರಣದಲ್ಲಿ ಎರಡು ವಿಧ. ವೆಂಟಿಲೇಟರ್ ಬೆಂಬಲ, ಡಯಾಲಿಸಿಸ್ ಅಥವಾ ಕ್ಲಿನಿಕಲಿ ಅಸಿಸ್ಟೆಡ್ ನ್ಯೂಟ್ರಿಷನ್ ಮತ್ತು ಹೈಡ್ರೇಷನ್ ತರಹದ ಜೀವ ಉಳಿಸುವ ವೈದ್ಯಕೀಯ ಚಿಕಿತ್ಸೆ ತಡೆಯುವ/ಹಿಂತೆಗೆಯುವ ಮೂಲಕ ರೋಗಿಯ ಸ್ವಾಭಾವಿಕ ಸಾವಿಗೆ ಅನುಮತಿ ನೀಡುವ ವಿಧಾನ ನಿಷ್ಕ್ರಿಯ ದಯಾಮರಣ. ಹರೀಶ್ ರಾಣಾ ವಿಚಾರದಲ್ಲಿ ಈ ವಿಧಾನವನ್ನು ಬಳಸಲಾಗಿದೆ. ವೈದ್ಯರು ಮಾರಕ ಔಷಧಿಗಳನ್ನು ನೀಡಿ, ತೀವ್ರ ರೋಗಗಳಿಂದ ಬಳಲುವ ರೋಗಿಯ ಜೀವ ತೆಗೆಯುವ, ಒಂದಷ್ಟು ಕ್ರೂರ ಅನಿಸುವ ವಿಧಾನ ಸಕ್ರಿಯ ದಯಾಮರಣ. ಭಾರತದಲ್ಲಿ ಇದಕ್ಕೆ ಮಾನ್ಯತೆ ಇಲ್ಲ.

ನೆದರ್‌ಲೆಂಡ್ ಮತ್ತು ಬೆಲ್ಜಿಯಂ ದೇಶಗಳಲ್ಲಿ ಇದು ಜಾರಿಯಲ್ಲಿದೆ. ನಿಷ್ಕ್ರಿಯ ದಯಾ ಮರಣದಲ್ಲಿ ರೋಗಿಯ ಕುಟುಂಬದ ಜೊತೆ ಅನುಭವಿ ವೈದ್ಯರ ತಂಡ ಚರ್ಚಿಸಿ ಒಮ್ಮತವನ್ನು ದಾಖಲಿಸಲಾಗುತ್ತದೆ. ನಂತರ ಸ್ಥಳೀಯ ಮುಖ್ಯ ವೈದ್ಯಾಧಿಕಾರಿಯವರು ನೇಮಿಸಿದ ವೈದ್ಯರು ಮತ್ತೊಮ್ಮೆ ಈ ವಿಚಾರವನ್ನು ಪರಿಶೀಲಿಸಿ, ರೋಗಿಯ ಕುಟುಂಬದೊಡನೆ ಮಾತುಕತೆ ನಡೆಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು.

ರೋಗಿಯು ಸ್ವತಃ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿರದ, ಹರೀಶ್ ರಾಣಾ ತರಹದ ಪ್ರಕರಣಗಳಲ್ಲಿ ಕುಟುಂಬ ಸದಸ್ಯರ ಮನವಿಯನ್ನು ಪರಿಶೀಲಿಸಿ, ಉತ್ತಮ ಹಿತಾಸಕ್ತಿ ತತ್ವದ ಆಧಾರದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ. ಹರೀಶ್ ರಾಣಾ ಪ್ರಕರಣದಲ್ಲಿ ಮೇಲೆ ಉಲ್ಲೇಖಿಸಿದ ಎರಡೂ ವೈದ್ಯತಂಡಗಳು ಮತ್ತು ಕುಟುಂಬವು ಸರ್ವಾನು ಮತದಿಂದ ಚೇತರಿಕೆ ಅಸಾಧ್ಯವೆಂದು ಒಪ್ಪಿಕೊಂಡ ಕಾರಣ ನ್ಯಾಯಾಲಯವು ನಿಷ್ಕ್ರಿಯ ದಯಾಮರಣಕ್ಕೆ ಅನುಮತಿ ನೀಡಿತು!

ಅರುಣಾ ಶಾನುಭಾಗ್ ಅವರಿಗೆ ಸಿಗದ ನಿಷ್ಕ್ರಿಯ ದಯಾಮರಣದ ಅವಕಾಶ ಹರೀಶ್ ರಾಣಾಗೆ ಸಿಕ್ಕಿತು. ಹಾಗೆ ನೋಡಿದರೆ ದಯೆ ಮತ್ತು ಮರಣ ಒಟ್ಟಿಗೆ ಸಾಗುವುದಾದರೂ ಹೇಗೆ!? ದಯೆಯು ಯಾವಾಗಲೂ ಬದುಕಿನ ಒಟ್ಟಿಗೆ ಜೊತೆಯಾಗಬೇಕಾದದ್ದು ಮತ್ತು ಮರಣದ ಜೊತೆಯಲ್ಲಿ ಅಲ್ಲ ಎನ್ನುವುದು ನಿರ್ವಿವಾದ!

ಇಂಥಾ ಸೂಕ್ಷ್ಮ ಮತ್ತು ಗಂಭೀರ ವಿಚಾರಗಳನ್ನು ಬೇರೆ ರೀತಿಯಲ್ಲಿ ನಿಭಾಯಿಸಲು, ಮರಣದ ಹೊರತಾದ ದಾರಿ ಕಂಡುಕೊಳ್ಳಲು ಸಾಧ್ಯವಿತ್ತೇ? ಎನ್ನುವ ಪ್ರಶ್ನೆ ಬಾರದಿರದು! ಅಖಿಖನಲ್ಲಿನ ಕೊನೆಯ ಕ್ಷಣದ ವಿಡಿಯೋದಲ್ಲಿ ಬ್ರಹ್ಮಕುಮಾರಿಯೊಬ್ಬರು ಹರೀಶ್ ರಾಣಾ ಹಣೆಗೆ ಏನೋ ಹಚ್ಚಿ ಹೊರಡುವ ಸಮಯ ಬಂದಿದೆ, ಎಲ್ಲರನ್ನೂ ಕ್ಷಮಿಸು, ಶಾಂತಿ ಪ್ರಾಪ್ತಿಯಾಗಲಿ ಎಂದು ಹೇಳುವಾಗ ಕರುಳು ಕಿತ್ತು ಬರುವ ಅಸಹಾಯಕ ಸ್ಥಿತಿ.

ಕೊನೆಗೂ ಹರೀಶ್ ರಾಣಾ ಜೀವ ಕಳಕೊಂಡು ನಿಸ್ತೇಜವಾದರು; ಪ್ರತಿದಿನ ಸತ್ತು ಬದುಕುತ್ತಿದ್ದ ಅವರ ಹೆತ್ತವರು ಮನದ ಭಾರ ಕಳೆದುಕೊಂಡು ಹಗುರಾಗಿರಬಹುದೇನೋ!? ಈ ದುಃಖದ ಸಂದರ್ಭದಲ್ಲೂ ಹರೀಶ್ ರಾಣಾ ಅವರ ಕಣ್ಣುಗಳು ಸೇರಿದಂತೆ ವಿವಿಧ ಅಂಗಾಂಗಗಳನ್ನು ದಾನ ಮಾಡುವ ಸರ್ವಶ್ರೇಷ್ಠ ನಿರ್ಧಾರಕ್ಕೆ ಆತನ ತಂದೆತಾಯಿಗೆ ದೊಡ್ಡ ಸಲಾಂ. ಯಾರಿಗೂ ಹರೀಶ್ ರಾಣಾ ಮತ್ತು ಅವರ ಕುಟುಂಬ ಅನುಭವಿಸಿದ ನೋವು, ದುಗುಡ, ನರಕಯಾತನೆ ಬಾರದಿರಲಿ. ಈ ದಯಾಮರಣಕ್ಕಾಗಿ ಕೋರ್ಟಿಗೆ ಎಡತಾಗುವ, ಅರ್ಜಿ ಸಲ್ಲಿಸುವ ಹತಾಶೆ-ಅಸಹಾಯಕ ಸ್ಥಿತಿ ಯಾರೊಬ್ಬರಿಗೂ ಒದಗದಿರಲಿ. ದಯೆಯೇ ಧರ್ಮದ ಮೂಲವಯ್ಯಾ.... ಎಂದು ಸಾರುವ ಶ್ರೇಷ್ಠ ಪರಂಪರೆ ನಮ್ಮದು.

**- ರವೀ ಸಜಂಗದ್ದೆ,** (ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)



## ಸೌಖ್ಯವೂ ಸಿಗಬಹುದು....

ಇತ್ತೀಚೆಗೆ ಸ್ವಲ್ಪ ವರ್ಷಗಳ ಹಿಂದೆ ನಮ್ಮ ಬಂಧುಗಳ ಮಗಳಿಗೆ ವಿವಾಹ ನಿಶ್ಚಯವಾಗಿತ್ತು. ಇರುವ ಓರ್ವ ಮಗ ಉತ್ತಮ ಕೆಲಸವಿದೆಯೆಂದು ವಿದೇಶಕ್ಕೆ ಕಲಿಯಲೆಂದು ಹೋದವ, ಅಲ್ಲಿಯೇ ಮದುವೆಯಾಗಿ ಊರಿನತ್ತ ಬರುವುದನ್ನೇ ಬಿಟ್ಟಿದ್ದ. ಆ ಹೆತ್ತವರು ಎಷ್ಟೋ ಸಲ ನನ್ನ ಹತ್ತಿರ ಹೇಳಿದ್ದುಂಟು ನಾವು ಮಗನಿಗೆ ಸರಿಯಾದ ಸಂಸ್ಕಾರ ನೀಡಿ ಬೆಳೆಸದ್ದನ್ನು ಈಗ ಉಣ್ಣುತ್ತಿದ್ದೇವೆ ಎಂದು. ಬಾಲ್ಯದ ಆಗುಹೋಗುಗಳು, ವಿದ್ಯೆ, ಬುದ್ಧಿಯನ್ನು ತಿದ್ದುವಿಕೆ, ಸಹವಾಸ, ಮನೆಯ ಸದಸ್ಯರ ವರ್ತನೆ ಒಡನಾಟಗಳು ಜೀವನದ ಮೇಲೆ ಬಹಳ ಪರಿಣಾಮ ಬೀರುತ್ತದೆ. ಅಂಕಗಳು ನೂರಕ್ಕೆ ನೂರು ಸಿಗಬಹುದು, ಸಂಸ್ಕಾರದ ಕೊರತೆ ಬದುಕಿನುದ್ದಕ್ಕೂ ಬರುವುದು ಸಹಜ ಎಂದು ನನ್ನ ಮನಸ್ಸು ಹೇಳಿತು. ಆದರೂ ಅವರನ್ನು ಸಮಾಧಾನ ಪಡಿಸುತ್ತಿದ್ದೆ. ಒಬ್ಬಳೇ ಮಗಳೆಂದು ಬಹಳ ಸಂಭ್ರಮದಿಂದ ವಿವಾಹದ ತಯಾರಿಗಳನ್ನೆಲ್ಲ ನಡೆಸಿದ್ದರು. ಕಾರ್ಯಕ್ರಮದ ಕನಸು ಹೆತ್ತವರಿಗೆ ಇರುವುದು, ಸಾಧ್ಯವಾದಷ್ಟು ನೆರವೇರಿಸೋಣ ಎನ್ನುವ ಅಭಿಲಾಷೆ ಸಹಜ. ದೇವರೂ ಸಾಕಷ್ಟು ನೀಡಿದ್ದ, ಕಷ್ಟದ ದುಡಿಮೆಗಾರರು, ಅವಿಭಕ್ತ ಕುಟುಂಬವಾಗಿತ್ತು. ಇನ್ನೇನು ಮದುವೆಗೆ ನಾಲ್ಕು ದಿನವಿರುವಾಗ ವರನ ಕಡೆಯಿಂದ ನಕಾರ ಬಂತು. ಯಾಕೆ ಎಂದು ವಿಚಾರಿಸಿದರೆ ಹುಡುಗಿ ಇಷ್ಟವಿಲ್ಲವಂತೆ, ಹಾಗಾದರೆ ಮೊದಲು ಕಣ್ಣಿರಲಿಲ್ಲವೇ? ಇಷ್ಟೆಲ್ಲ ತಯಾರಿ ನಡೆಸಲು ಶ್ರಮ ಮತ್ತು ಹಣ ಇದರ ಅಂದಾಜಿಲ್ಲವೇ? ದಾಕ್ಷಿಣ್ಯ ಎನ್ನುವುದು ಇಂದಿನ ಯುವ ಜನಾಂಗದವರ ಹತ್ತಿರ ಇಲ್ಲವೆನ್ನಬಹುದು. ಹೆತ್ತವರ ಮರ್ಯಾದೆ ಹೋಗುವುದರ ಅರಿವೇ ಅವರಿಗಿಲ್ಲ. ಅಂತೂ ವಿಷಯ ತಿಳಿವಾಗ ಮುರಿದು ಬಿದ್ದದ್ದೇ ಒಳ್ಳೆಯದಾಯಿತೆಂದು ತಿಳಿಯಿತು. ಹುಡುಗನಿಗೆ ಈಗಾಗಲೇ ನಿಶ್ಚಯವಾದ ಹೆಣ್ಣುಮಗಳು ಊರ ಠಾಣೆಯಲ್ಲಿ ದೂರು ದಾಖಲಿಸಿದ್ದಾಳಂತೆ. ತಕ್ಕ ಶಾಸ್ತಿಯೂ ಆಯಿತು ಆತನಿಗೆ. ಅವಳೂ ಮದುವೆಯಾಗಿಲ್ಲ, ಬೇರೆ ಯಾರೂ ಹೆಣ್ಣು ಕೊಡಲಿಲ್ಲ. ನಾನು ಹೇಳಿದ್ದು ಒಂದೇ ಮಾತು ಆ ಹೆತ್ತವರಿಗೆ ಮತ್ತು ಹೆಣ್ಣುಮಗಳಿಗೆ ಓದಿಸಿ ಎಂಬುದಾಗಿ. ಇದೀಗ ಆಕೆ ಊರಿನಲ್ಲಿ ಜನಾನುರಾಗಿ ವಕೀಲೆ. ಮದುವೆಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾಳೆ, ಚೆನ್ನಾಗಿದ್ದಾಳೆ. ಸೋಲು ಬಂತೆಂದು ಕೂರುವುದಲ್ಲ, ಧೈರ್ಯದಿಂದ ಎದುರಿಸಬೇಕು. ಹೇಳುವವರು ನೂರೆಂಟು ಹೇಳಲಿ. ಒಳ್ಳೆಯದನ್ನು ಸ್ವೀಕರಿಸಿ, ಹಿಂದಿರುಗಿ ನೋಡದೆ ಮುಂದುವರಿಯುವುದನ್ನು ಕಲಿಯಬೇಕು. ಹತಾಶೆಯಿಂದ ಉಸಿರೇ ನಿಲ್ಲಿಸಬಾರದು,ಅಂತಹ ಕೆಟ್ಟ ಆಲೋಚನೆಗಳೇ ಬರಬಾರದು.

ಏನೋ ಒಂದು ಕಷ್ಟವಾಯಿತೆಂದು ಚಿಂತಿಸಿದರೆ ಫಲವಿಲ್ಲ. ತಕ್ಕ ಪರಿಹಾರ ಹುಡುಕಿ ಸರಿಪಡಿಸುವುದೇ ಜಾಣರ ಲಕ್ಷಣ. ಬರಿಯ ಪುಸ್ತಕದ ಬದನೆಕಾಯಿ ಸಾಲದು, ನೋಡಿ, ಕೇಳಿ, ಅನುಭವದ ಮೂಲಕ ಉತ್ತಮವ ಚಿತ್ತದೊಳ್ ಸಂಗ್ರಹಿಸಿದರೆ ಸಕಾಲಕ್ಕೆ ಉಪಯೋಗವಾಗಬಹುದು.

ಮನಸಾ ಚಿಂತಿತಂ ಕಾರ್ಯಂ ವಚನಾ ನ ಪ್ರಕಾಶಯೇತ್
ಅನ್ಯ ಲಕ್ಷಿತ ಕಾರ್ಯಸ್ಯ ಯತಃ ಸಿದ್ಧಿಃ ನಜಾಯತೆ

ಮನಸ್ಸಿನಲ್ಲಿ ಇರುವ ಚಿಂತೆಗಳನ್ನು ದೂರಮಾಡಿ, ಖಾಲಿಯಾದ ಜಾಗಕ್ಕೆ ಚಿಂತನೆಗಳನ್ನು ತರೋಣ. ಅದನ್ನು ಎಲ್ಲರಲ್ಲೂ ಹೇಳಿಕೊಂಡು ಬರುವ ಅಗತ್ಯವಿಲ್ಲ. ಒಳ್ಳೆಯ ಯೋಚನೆಗಳನ್ನು ಕಾರ್ಯರೂಪಕ್ಕೆ ತಂದಾಗ ಮನದ ಗೊಂದಲ ನಿವಾರಣೆಯಾಗಬಹುದು. ಆರೋಗ್ಯವೂ ಚೆನ್ನಾಗಿರಬಹುದು. ಬಾಳ ಹಾದಿಯಲ್ಲಿ ಕ್ಷೇಮವೂ, ಸೌಖ್ಯವೂ ಸಿಗಬಹುದು.

**- ರತ್ನಾ ಭಟ್** ತಲಂಜೇರಿ



## ಅಲಸಂಡೆ ಬೆಳೆಯಲ್ಲಿ ಸಸ್ಯ ಹೇನು ನಿಯಂತ್ರಣ

ಮೊದಲೆಲ್ಲಾ ಯಾವುದೇ ಶುಭ ಕಾರ್ಯವಿರಲಿ ಊಟಕ್ಕೆ ಅಲಸಂಡೆಯ ಪಲ್ಯ ಅವಿಭಾಜ್ಯ ಅಂಗವಾಗಿರುತ್ತಿತ್ತು. ಅಲಸಂಡೆಯ ಪಲ್ಯ ಅಷ್ಟೊಂದು ರುಚಿಕರ. ಕ್ರಮೇಣ ಅಲಸಂಡೆ ಬೆಳೆಗೆ ಹಲವಾರು ಕೀಟಗಳ ಆಕ್ರಮಣದ ಪರಿಣಾಮ ಈಗ ಉತ್ತಮ ಅಲಸಂಡೆ ಸಿಗುವುದೇ ಇಲ್ಲ. ಹೀಗಾಗಿ ಊಟದ ಖಾದ್ಯಗಳ ಪಟ್ಟಿಯಿಂದ ಅಲಸಂಡೆ ಪಲ್ಯ ಅನಿವಾರ್ಯವಾಗಿ ಹೊರಗುಳಿಯುವಂತಾಗಿದೆ. ಕರಾವಳಿಯಲ್ಲಿ ಸ್ಥಳೀಯವಾಗಿಯೂ ಹಲವಾರು ಮಂದಿ ಕೃಷಿಕರು ಅಲಸಂಡೆಯನ್ನು ಬೆಳೆಯುತ್ತಿದ್ದರು. ಮೀಟರ್ ಉದ್ದದ ಅಲಸಂಡೆಯೂ ಲಭ್ಯವಿತ್ತು.

ಅಲಸಂಡೆ ಮಳೆಗಾಲದಲ್ಲಿ ಬೆಳೆಯಬಹುದಾದ ಉತ್ತಮ ತರಕಾರಿ ಬೆಳೆಯಾಗಿದ್ದು ಈ ಬೆಳೆಗೆ ಬರುವ ಪ್ರಮುಖ ಕೀಟ ಹೇನು. ಈ ಹೇನು ಸಸ್ಯದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ, ಕಾಯಿಯ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ, ಹೂ ಮೊಗ್ಗು ಬರುವ ಭಾಗವನ್ನು ಸಹ ಹಾಳು ಮಾಡುತ್ತದೆ. ಹೇನಿನ ಕಾರಣಕ್ಕೆ ಅಲಸಂಡೆಯಲ್ಲಿ ಗಣನೀಯ ಪ್ರಮಾಣದಲ್ಲಿ ಇಳುವರಿ ಕಡಿಮೆಯಾಗುತ್ತದೆ.

ಸಸ್ಯ ಹೇನುಗಳಲ್ಲಿ ಸುಮಾರು 250 ಬಗೆಯ ಪ್ರಭೇಧಗಳಿದ್ದು, ಹೆಚ್ಚಿನವು ಬೆಳೆಗಳಿಗೆ ಹಾನಿ ಮಾಡುವವುಗಳಾಗಿವೆ. ಇವು ರಸ ಹೀರುವುದು ಮಾತ್ರವಲ್ಲದೆ ಕೆಲವು ರೋಗಗಳನ್ನೂ ಪ್ರಸರಿಸುತ್ತವೆ. ಇದರ ನಿಯಂತ್ರಣಕ್ಕೆ ಬೇರೆ ಬೇರೆ ಉಪಾಯಗಳಿದ್ದು, ರಾಸಾಯನಿಕವಾಗಿ ಡೈಮಿಥೋಯೇಟ್ ಕೀಟನಾಶಕವನ್ನು ಬಳಸಿ ಇದನ್ನು ನಿಯಂತ್ರಿಸಲಾಗುತ್ತದೆ. 2.5 ಮಿಲಿ 1 ಲೀ ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು. ಡೈಮಿಥೊಯೇಟ್ (ರೋಗ) ಇದನ್ನು ಬಳಕೆ ಮಾಡಿ ಸುಮಾರು 1 ವಾರ ತನಕವಾದರೂ ಅದನ್ನು ಬಳಕೆ ಮಾಡಬಾರದು. ಆದರೆ ಹಾಗೆ ಮಾಡಲಿಕ್ಕಾಗುವುದಿಲ್ಲ. ಇದರ ಬದಲಿಗೆ ಇನ್ನೂ ಕೆಲವೊಂದು ನಿವಾರಣಾ ಉಪಾಯಗಳಿವೆ.



1. ಹೆಚ್ಚಾಗಿ ಸಸ್ಯ ಹೇನುಗಳು ಎಳೆ ಚಿಗುರಿನ ಬಾಗದಲ್ಲಿ ಮೂಲತಃ ಕಂಡು ಬರುತ್ತವೆ. ಮೊದಲಾಗಿ ಇದನ್ನು ಗುರುತಿಸಿದ್ದೇ ಆದರೆ ಎಲ್ಲಿ ಇದರ ಹಿಂಡು ಇದೆಯೋ ಆ ಭಾಗವನ್ನು ಕತ್ತರಿಸಿ ತೆಗೆದು ಬೆಂಕಿಗೆ ಹಾಕಿ ನಾಶ ಮಾಡಬಹುದು.

2. ಅಧಿಕ ಒತ್ತಡದಲ್ಲಿ ನೀರನ್ನು ಈ ಸಸ್ಯ ಹೇನುಗಳು ಇರುವ ಭಾಗಕ್ಕೆ ಸಿಂಪಡಿಸಿದಾಗ ಅದು ಸಣ್ಣ ಜೀವಿಯಾದ ಕಾರಣ ತೊಳೆದು ಹೋಗಿ ತಕ್ಕಮಟ್ಟಿಗೆ ನಿಯಂತ್ರಣಕ್ಕೆ ಬರುತ್ತದೆ.

3. ಸಾಬೂನಿನ ದ್ರಾವಣ (ಧೋಬಿ ಸಾಬೂನು ಅಥವಾ ಡಿಷ್ ವಾಶ್) ಒಂದು 50 ಗ್ರಾಂ ನಷ್ಟು ಇರುವ ಒಂದು ತುಂಡು ಸಾಬೂನನ್ನು ನೀರಿನಲ್ಲಿ ಕರಗಿಸಿ ಅದನ್ನು ಸುಮಾರು 5 ಲೀ. ನೀರಿಗೆ ಮಿಶ್ರಣ ಮಾಡಿ ಅದನ್ನು ಸಿಂಪರಣೆ ಮಾಡುವುದರಿಂದ ಸಸ್ಯ ಹೇನುಗಳು ಕಡಿಮೆಯಾಗುತ್ತವೆ. ಸಾಬೂನಿನ ಖಾರ ಸಸ್ಯ ಹೇನುಗಳಿಗೆ ಮಾರಕವಾಗುತ್ತದೆ.

ಬೇವಿನ ಎಣ್ಣೆ ಅಥವಾ ಹೊಂಗೆ ಎಣ್ಣೆಯನ್ನು ಸಾಬೂನು ನೀರಿನ ಜೊತೆಗೆ ಮಿಶ್ರಣ ಮಾಡಿ ಸಿಂಪರಣೆ ಮಾಡಿಯೂ ಸಸ್ಯ ಹೇನು ನಿಯಂತ್ರಣ ಮಾಡಬಹುದು. ಈ ಸಿಂಪರಣೆಯನ್ನು ಮಾಡುವಾಗ ಅಧಿಕ ಒತ್ತಡದಲ್ಲಿ ಹೇನುಗಳು ಇರುವ ಭಾಗಕ್ಕೆ ಬೀಳುವಂತೆ ಸಿಂಪಡಿಸಬೇಕು.

### ಕರಾವಳಿಯಲ್ಲಿಯೂ ಅಲಸಂಡೆ

- ಕರಾವಳಿಯಲ್ಲಿ ಸ್ಥಳೀಯವಾಗಿಯೂ ಹಲವಾರು ಮಂದಿ ಕೃಷಿಕರು ಅಲಸಂಡೆಯನ್ನು ಬೆಳೆಯುತ್ತಿದ್ದರು.
- ಮೀಟರ್ ಉದ್ದದ ಅಲಸಂಡೆಯೂ ಲಭ್ಯವಿತ್ತು.
- ಅಲಸಂಡೆ ಮಳೆಗಾಲದಲ್ಲಿ ಬೆಳೆಯಬಹುದಾದ ಉತ್ತಮ ತರಕಾರಿ ಬೆಳೆಯಾಗಿದ್ದು ಈ ಬೆಳೆಗೆ ಬರುವ ಪ್ರಮುಖ ಕೀಟ ಹೇನು.
- ಈ ಹೇನು ಸಸ್ಯದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ, ಕಾಯಿಯ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ, ಹೂ ಮೊಗ್ಗು ಬರುವ ಭಾಗವನ್ನು ಸಹ ಹಾಳು ಮಾಡುತ್ತದೆ.
- ಹೇನಿನ ಕಾರಣಕ್ಕೆ ಅಲಸಂಡೆಯಲ್ಲಿ ಗಣನೀಯ ಪ್ರಮಾಣದಲ್ಲಿ ಇಳುವರಿ ಕಡಿಮೆಯಾಗುತ್ತದೆ.

4. ಕೆಲವು ಕಡೆ ಕೀಟ ನಿಯಂತ್ರಕ ಸಾಬೂನುಗಳು ಲಭ್ಯವಿದೆ. ಈ ಸಾಬೂನಿನಲ್ಲಿ ಬೇವು, ಹೊಂಗೆ ಜೊತೆಗೆ ಸಾಬೂನಿಗೆ ಬಳಕೆ ಮಾಡುವ ಮೂಲವಸ್ತುಗಳನ್ನು ಸೇರಿಸಿರುತ್ತಾರೆ. ಇದನ್ನು ಕಲಕಿ ಸಿಂಪರಣೆ ಮಾಡಿಯೂ ಸಸ್ಯ ಹೇನು ನಿಯಂತ್ರಿಸಬಹುದು.

5. ಪ್ರಕೃತಿಯಲ್ಲಿ ಕೆಲವೊಂದು ಉಪಕಾರೀ ಕೀಟಗಳಿದ್ದು, ಹಸುರು ಬಣ್ಣದ ಮಿಡತೆಯೊಂದು ಸಸ್ಯ ಹೇನುಗಳನ್ನು ತಿನ್ನುತ್ತದೆ. ಇದನ್ನು ಗುರುತಿಸಿ ಅಲಸಂಡೆ ಬೆಳೆಯುವಲ್ಲಿ ಬಿಡುವುದರಿಂದ ಸಸ್ಯ ಹೇನು ನಿಯಂತ್ರಿಸಬಹುದು.

**- ರಾಧಾಕೃಷ್ಣ** ಹೊಳ್ಳ

## ಬಾಳು ಯಾಕೆ ಹೀಗೆ ?????

ಆಗಸದತ್ತ ನೋಡುತ್ತಾ ಅದೇನನೋ ಆಲೋಚಿಸುತ್ತಿದ್ದವನಿಗೆ ಪಿಸುಮಾತು ಕಿವಿಗೆ ಬಿತ್ತು.. ಅದರ ಜೊತೆಜೊತೆಗೆ ಸಣ್ಣಗೆ ಅಳುವ ಸದ್ದು

ಮನುಷ್ಯ ಯಾಕೆ ಹೀಗಿದ್ದಾನೆ, ಪ್ರಪಂಚ ಯಾಕೆ ಹೀಗಿದೆ, ಹಣ ಹಣ ಎಂದು ಅಳೆಯುತ್ತಾನೆ. ಯಾವುದಕ್ಕೂ ಉತ್ತರ ಸಿಗಲಿಲ್ಲ.

ಕೂತವನಿಗೆ ಮತ್ತೆ ಪಿಸುಮಾತು ಗಟ್ಟಿ ಗಟ್ಟಿಯಾಗಿ ಕಿವಿಗೆ ಬಿತ್ತು. ಅತ್ತ ತಿರುಗಿ ನೋಡಲು ಮಾಧ್ಯಮ ವಯಸ್ಸಿನ ಮಹಿಳೆ ಮತ್ತು ಹಿರಿ ಹರೆಯದ ಮಹಿಳೆ ಮಾತಾಡುವುದು ಕಂಡಿತು. ಮಾತು ಮೆಲುಧ್ವನಿಯಲ್ಲಿ ಮತ್ತು ಬಿಟ್ಟು ಬಿಟ್ಟು ಆಗುತ್ತಿತ್ತು. ರಾಧಮ್ಮ ನೀವೇ ಹೇಳಿ ನನ್ನಷ್ಟು ಅದೃಷ್ಟ ಹೀನಳನ್ನು ಎಲ್ಲಿಯಾದರು ನೋಡಿದ್ದೀರಾ, ಹುಟ್ಟು ಬಡತನದ ಮನೆತನದಲ್ಲಿ, ಹುಟ್ಟಿ ಅದಿನ್ನೂ 2 ವರುಷ ಕೂಡ ಆಗಿರಲಿಲ್ಲ, ತಂದೆಯನ್ನು ಕಳೆದುಕೊಂಡೆ, ಮತ್ತೆ ಹೆತ್ತವಳು ದಾರಿಕಾಣದೆ ಮತ್ತಾರನ್ನೋ ಕಟ್ಟಿಕೊಂಡು ಓಡಿದಳು ಅಂತ ಅಲ್ಲಿದ್ದವರು ಅಂದರು. ಆದರೆ ನಾನು ಅಲ್ಲೇ ದೇವಸ್ಥಾನದ ಗೋಪುರದಲ್ಲಿದ್ದೆ.

ಅಲ್ಲಿಂದ ನನ್ನನ್ನು ಅದು ಯಾರೋ ಪುಣ್ಯಾತ್ಮ ಅನಾಥಾಶ್ರಮಕ್ಕೆ ಸೇರಿಸಿದ. ಅದು ಯಾರೋ ನಡೆಸುತ್ತಿದ್ದ ಆಶ್ರಮ. ಅದನ್ನು ನಡೆಸುತ್ತಿದ್ದವರು ಅಲ್ಪ ಸ್ವಲ್ಪ ನನ್ನ ಮೇಲೆ ಕನಿಕರದಿಂದ ಇದ್ದರು. 5 ವರುಷ ಆಗುತ್ತಲೇ ನನ್ನನ್ನು ಹತ್ತಿರದ ಶಾಲೆಗೆ ಸೇರಿಸಿದರು, ಅಲ್ಲಿ ನಾನು ಹಲವಾರು ಮಕ್ಕಳ ಜೊತೆ ಬೆಳೆದರೂ ಅಲ್ಲಿಯೂ ನನಗೆ ನನ್ನ ಹಣೆಬರಹದ ಅರಿವಾಗಿತ್ತು. ಕಲಿಕೆಯಲ್ಲಿ ಎಲ್ಲರಿಗಿಂತ ಮುಂದೆ ಇದ್ದರೂ ಅದನ್ನು ಪ್ರಶಂಶಿಸುವವರು ಯಾರೂ ಇರಲಿಲ್ಲ. ಆಶ್ರಮದಲ್ಲಿ ನನ್ನನ್ನು ನೋಡಲು ಯಾರೊಬ್ಬರೂ ಬರಲಿಲ್ಲ. ಅಲ್ಲಿರುವ ಬೇರೆ ಬೇರೆ ಮಕ್ಕಳನ್ನು ನೋಡಲು ಅವರ ಬಂದು ಬಳಗದವರು ರಾಜಾ ದಿನ ರವಿವಾರ ಬರುವಾಗ, ನಾನು ಆಶ್ರಮದ ಗೇಟನ್ನು ಹಿಡಿದು ನೇತಾಡುತ್ತಿದ್ದೆ, ನನ್ನನ್ನು ನೋಡಲು ಯಾರಾದರೂ ಬರುತ್ತಾರಾ ಎಂದು.

ಆದರೆ ಹಾಗೆ ಆಗಲೇ ಇಲ್ಲ. ಆಶ್ರಮದ ಯಜಮಾನರ ಮನೆಕೆಲಸದ ಜೊತೆಗೆ ನನ್ನ ಓದು ಸಾಗುತ್ತಿತ್ತು. ಹಾಗಿರುವಾಗ ನನ್ನ ಎಸ್‌ಎಸ್‌ಎಲ್‌ಸಿ ಮುಗಿದಿತ್ತು ನನಗೆ 16 ವಯಸು ಬೇರೆ ಆಗಿತ್ತು ಋತುಮತಿಯಾಗಿ ಎಲ್ಲರಂತೆ ನಾನು ಬೆಳೆದು ನಿಂತಿದ್ದೆ. ನೋಡಲು ಸುಂದರಿ ಅಲ್ಲದಿದ್ದರೂ ಕುರೂಪಿಯಂತೂ ಅಲ್ಲ. ಹಾಗಾಗಿ ಅಲ್ಲಿಗೆ ದೇಣಿಗೆ ಕೊಡಲು ಬರುತ್ತಿರುವವರ ಕಣ್ಣು ನನ್ನ ಮೇಲೆ ಬೀಳುತ್ತಿತ್ತು. ಹಾಗಿರುವಾಗ ಅಲ್ಲಿಗೆ ದೇಣಿಗೆ ಕೊಡಲು ಬರುತ್ತಿದ್ದವನೇ ಶೇಕರ ನನಗಿಂತ 10 -12 ವರುಷ ದೊಡ್ಡವ. ಆತ ಬರುವಾಗ ನನಗಾಗಿ ಏನನ್ನಾದರೂ ತರುತ್ತಿದ್ದ ಮತ್ತು ಹೋಗುವಾಗ ನನಗೇನಾದರೂ ಬೇಕಾ ಎಂದು ಕೇಳುತ್ತಿದ್ದ. ಅದಕ್ಕೆಲ್ಲ ನನ್ನ ಉತ್ತರ ಏನೂ ಬೇಡ. ಆದರೂ ಆತ ನನಗೆ ಇಷ್ಟವಾದ ತಿಂಡಿ ಬಳೆಗಳು ಕೂದಲಿಗೆ ಹಾಕುವ ಕ್ಲಿಪ್ ಎಲ್ಲ ತರುತ್ತಿದ್ದ. ನನಗೋ ಸಂತೋಷವಾದರೂ ಅದನ್ನು ತೋರಿಸುತ್ತಿರಲಿಲ್ಲ.

ಆಗ ಹದಿಹರೆಯದವರು ಹೌದು ನಿನ್ನ ಹೆಸರೇನು, ಅದೇನು ಹೆಸರೋ ಗೊತ್ತಿಲ್ಲ ಶ್ರೀಮತಿ ಅಂತೇ, ಆದರೆ ಹೆಸರಿಗೆ ತಕ್ಕಂತೆ ನನಗೆ ಯಾವುದೇ ಭಾಗ್ಯ ಇಲ್ಲ. ಹೆಸರಿನಂತೆ ನನಗೆ ಯಾವುದೇ ಸಿರಿತನವಾಗಲಿ ಹೆತ್ತವರಾಗಲಿ ಮನೆ ಮಠವಾಗಲಿ ಸಿಗಲಿಲ್ಲ. ಅನಾಥೆ ಅನ್ನುವ ಪಟ್ಟ ಅಷ್ಟೇ.

ಶ್ರೀಮತಿ ಮತ್ತೆ ಮುಂದುವರಿಸುತ್ತಾ, ಹಾಗೆ ಒಂದೆರಡು ವರುಷ ಕಳೆಯಿತು, ನನಗೆ ಹದಿನೆಂಟು ದಾಟಿತು, ಶೇಕರ ಮತ್ತೆ ಆಶ್ರಮದ ಯಜಮಾನರ ಮತ್ತು ಅವರ ಮಡದಿಯ ಬಳಿ ಆತನ ಮನದ ಇಂಗಿತವನ್ನು ಅಂದರೆ ನನ್ನನ್ನು ಮದುವೆ ಮಾಡಿ ಕೊಳ್ಳುವ ವಿಚಾರ ಪ್ರಸ್ತಾಪ ಮಾಡಿದ.ಅವರು ಅಷ್ಟು ಮುತುವರ್ಜಿ ವಹಿಸದ್ದನ್ನು ಕಂಡು ಮತ್ತೆ ನೇರವಾಗಿ ನನ್ನ ಬಳಿಯೇ ನಾನು ನಿನ್ನನ್ನು ಇಷ್ಟಪಡುತ್ತಿದ್ದೇನೆ ನನ್ನನ್ನು ಮದುವೆ ಆಗುತ್ತೀಯ.....

ಅದಕ್ಕೆ ನನ್ನ ಉತ್ತರ ಮೌನ, ಕಾರಣ ನನಗೆ ಆ ಯೋಗ್ಯತೆ ಇಲ್ಲ, ಬಾಳು ಪೂರಾ ಇಲ್ಲೇ ಅನಾಥಳಾಗಿ ಇಲ್ಲಿಯ ಕೆಲಸಮಾಡಿ ಬದುಕಿ ಸಾಯಬೇಕು. ಹಠಬಿಡದ ಶೇಕರ ಮತ್ತೆ ಯಜಮಾನರ ಬಳಿ ವಿಚಾರಿಸಿದ. ಆಶ್ರಮದ ಯಜಮಾನರು ಆತನ ಪೂರ್ವಾಪರವನ್ನು ಅರಿಯಲು ಅವನ ಮನೆಯವರನ್ನು ಆಶ್ರಮಕ್ಕೆ ಬರಲು ಹೇಳಿದರು. ಆದರೆ ಅಲ್ಲಿಗೆ ಬಂದವರು ಆತನ ಮುದಿ 60 ದಾಟಿದ ತಾಯಿ. ಗಂಗಮ್ಮ. ಯಜಮಾನರ ಮಾತಿಗೆ ಪ್ರಸ್ತಾವನೆಗೆ ಉತ್ತರಿಸುತ್ತಾ ಗಂಗಮ್ಮ, ನನಗೆ 3 ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡುಮಕ್ಕಳು, ಹೆಣ್ಣು ಮಕ್ಕಳಿಗೆ ಮದುವೆ ಆಗಿದೆ, ಗಂಡು ಮಕ್ಕಳಲ್ಲಿ ಶೇಕರ ದೊಡ್ಡವ. ಗಂಡ ಸತ್ತು 40 ವರುಷಗಳಿಗಿಂತ ಜಾಸ್ತಿ ಆಗಿದೆ. ಮಕ್ಕಳನ್ನು ಸಾಕಿ ಬೆಳೆಸಿ ಮದುವೆ ಮಾಡಿ ಕೊಟ್ಟದ್ದು ಅದೇ ಗಂಗಮ್ಮ. ನೋಡಲು ಸುಂದರವಾಗಿಲ್ಲದಿದ್ದರು ಧೈರ್ಯಶಾಲಿ ಹೆಣ್ಣು ಅವರಿಗೂ ನನ್ನ ಹಿಡಿಸಿತು, ಅವರು ಮದುವೆಯ ಪ್ರಸ್ತಾಪ ಮಾಡಿದರು, ಅರೆಬರೆ ಮನಸಿಂದ ನಮ್ಮ ಯಜಮಾನರು ಒಪ್ಪಿದರು ಅಲ್ಲದೆ ನನ್ನ ಒಪ್ಪಿಗೆಯನ್ನು ಕೇಳಿದರು.

ಗೊತ್ತುಗುರಿ ಇಲ್ಲದ ನನ್ನ ಬಾಳಿಗೆ ಒಂದು ನೆಲೆಸಿಗುವಂತಾಯಿತು. ಬಾಳೆಂದರೆ ಏನೂ ಎಂದು ಅರಿಯದ ನಾನು ಮುಂದೇನು ಅನ್ನುವ ಗೊತ್ತು ಇಲ್ಲದಿದ್ದರೂ. ಕೊನೆಗೆ ಮದುವೆಗೆ ಒಪ್ಪಿದೆ,

ಶೇಖರನ ಮನೆಯವರು ಅಂದರೆ ಅವರ ತಾಯಿ ಗಂಗಮ್ಮ ಮೂವರು ಹೆಣ್ಣುಮಕ್ಕಳು ಮತ್ತು ಶೇಖರನ ತಮ್ಮ, ಆಶ್ರಮದಿಂದ ಯಜಮಾನರು ಮತ್ತು ಅವರ ಸಂಸಾರ ಅಷ್ಟೇ ಸೇರಿ ದೇವಸ್ಥಾನದಲ್ಲಿ ಮಾಲೆ ಹಾಕಿಸಿಕೊಂಡು ನಮ್ಮ ಮದುವೆ ನೆರವೇರಿತು. ಶೇಖರನ ಮನೆಗೆ ಹೋಗುತ್ತಲೇ ಮನಸಿಗೆ ಏನೋ ಭಯ, ಸಂತಸ, ಕಾತರ, ಇಲ್ಲಿ ಇನ್ನು ಹೇಗೆ ಅನ್ನುವ ತಳಮಳ. ಆದರೆ ಅತ್ತೆ ಗಂಗಮ್ಮ ಮೊದಲನೆಯ ದಿನದಿಂದಲೇ ನನ್ನನ್ನು ತನ್ನ ಮಗಳಂತೆ ನೋಡಿದರು ಮತ್ತು ಎಲ್ಲರೊಡನೆ ಇವಳು ನನಗೆ ನಾಲ್ಕನೆಯ ಮಗಳು ಅನ್ನುತ್ತಿದ್ದರು. ನನ್ನದು ಅನ್ನುವ ಒಂದು ಮರದ ಮಣೆಯೂ ಇಲ್ಲದ ನನಗೆ, ನನ್ನದೇ ಆದ ಮನೆ ಸಂಸಾರ ಗಂಡ ಎಲ್ಲ ದೊರಕಿದರು. ನನಗೆ ಆ ಮನೆ ಗುಡಿಸಲಾದರೂ ಸ್ವರ್ಗದಂತೆ ಕಂಡಿತು. ಹೆಚ್ಚು ಮಾತಿಲ್ಲದ ಗಂಡ ಶೇಕರ, ತನ್ನ ಮನೆಕೆಲಸದಲ್ಲಿ ತನ್ನನ್ನು ತಾನೇ ಸವೆಸಿಕೊಂಡ ಅತ್ತೆ ಗಂಗಮ್ಮ, ತಾನಾಯಿತು ತನ್ನ ಕೂಲಿಕೆಲಸವಾಯಿತು ಎಂದು ಬಾಳುತ್ತಿರುವ ಮೈದುನ, ಮದುವೆಯಾಗಿ ಗಂಡನಮನೆ ಸೇರಿದ ನಾದಿನಿಯರು.



ಶ್ರೀಮತಿಗೆ ಒಂದು ಹೊಸಬಾಳು ಸಿಕ್ಕಿತು ಅನ್ನುವಾಗಲೇ ಭರಸಿಡಿಲೊಂದು ಬಡಿದಂತೆ ಆಯಿತು. ಮದುವೆ ಆದ ನಾಲಕ್ಕನೆಯ ತಿಂಗಳಿಗೆ ಕೆಲಸಕ್ಕೆ ಹೋಗಿದ್ದ ಗಂಡ ಅಪಘಾತಕ್ಕೆ ಸಿಲುಕಿ ಅಲ್ಲೇ ಮರಣವನ್ನಪ್ಪಿದ್ದ, ಶ್ರೀಮತಿಯ ಬಾಳು ಮತ್ತೆ ಹಳಿತಪ್ಪಿದ ಹಾಗೆ ಆಯಿತು. ಮುಂದೇನು ಎನ್ನುವುದರ ಅರಿವಿಲ್ಲದೆ, ಶ್ರೀಮತಿ ತಾನೇನು ಮಾಡುತ್ತಿದ್ದೇನೆ ಎನ್ನುವುದರ ಅರಿವಿಲ್ಲದ ಹುಚ್ಚರಂತಾದಳು. ಊಟ ಬೇಡ ಸ್ನಾನಬೇಡ, ಮಾತಿಲ್ಲ. ನಿದ್ದೆ ಇಲ್ಲ.

ಆದರೆ ವಿಶಾಲ ಹೃದಯದ ಗಂಗಮ್ಮ ಅವಳನ್ನು ಸಮಾಧಾನ ಪಡಿಸುವಲ್ಲಿ 2 ವರುಷವಾದರೂ ಜಯ ಕಂಡರು. ಅತ್ತ ಸಾಯಲು ಆಗದೆ ಇತ್ತ ಬದುಕಲು ಆಗದ ಉಸಿರಾಡುವ ದೇಹದಂತಿದ್ದಳು ಶ್ರೀಮತಿ.

ಇದನ್ನೆಲ್ಲಾ ನೋಡುತ್ತಿದ್ದ ಶೇಖರನ ತಮ್ಮ ಶ್ರೀಧರ ಅವನ ತಾಯಿಯ ಬಳಿ ನಾನೇ ಯಾಕೆ ಶ್ರೀಮತಿಯನ್ನು ಮದುವೆ ಆಗಿ ಅವಳಿಗೆ ಬಾಳು ಕೊಡಬಾರದು.... ಇದನ್ನು ಕೇಳುತ್ತಲೇ ಗಂಗಮ್ಮ ಹೌದು ಇದು ಒಳ್ಳೆಯ ವಿಚಾರ ಅವಳನ್ನು ಒಂದು ಮಾತು ಕೇಳಿಕೊಳ್ಳುವ ಅಂದಾಗ, ಭಾವನೆಗಳು ಸತ್ತು ಹೋಗಿದ್ದ ಶ್ರೀಮತಿ ಮತ್ತೆ ಮೌನದತ್ತ ಜಾರಿದಳು, ಅತ್ತ ಮನೆಯಲ್ಲಿ ಇರಲಾಗದೆ ಹೊರಗೆ ಹೋದರೆ ಬೇರೆ ನೆಲೆ ಇಲ್ಲದೆ, ಕೊನೆಗೆ ಶ್ರೀಮತಿ ಅತ್ತೆ ಮೈದುನನ ಮಾತಿಗೆ ಒಪ್ಪಿ ಮತ್ತೆ ತಾಳಿ ಕಟ್ಟಿಸಿಕೊಂಡಳು. ಆದರೂ ಶ್ರೀಮತಿಯ ಮನಸು ಬಾಳಿನುದ್ದಕ್ಕೂ ನೊಂದು ಸುಟ್ಟು ಕಾರಕಲಾಗಿತ್ತು, ಮನಸಿನಲ್ಲಿ ಅಚ್ಚಹಾಕಿದಂತಿದ್ದ ಶೇಖರನ ನೆನಪು ಮಾಸದಾಯಿತು. ಅದು ಮತ್ತೆ ಚಿಗುರಲಾಗದೆ ಹಾಗೆ ಇತ್ತು. ಶ್ರೀಧರ ಎಷ್ಟೇ ಪ್ರಯತ್ನ ಮಾಡಿದರು ಆಕೆ ಉಸಿರಾಡುವ ಬೊಂಬೆಯಂತೆ.

ಇದು ನನ್ನ ಬಾಳಿನ ಘೋರ ಕತೆ.... ನನ್ನ ಹಣೆ ಬರಹವೇ ಹೀಗಿರುವಾಗ ನಾನು ಬಾಳಲ್ಲಿ ಏನನ್ನು ಬಯಸಲಿ ಎಂದು ಶ್ರೀಮತಿ ಜೊತೆ ಮಾತಾಡುತ್ತಿದ್ದ ಮುದಿ ಹರೆಯದವರಲ್ಲಿ ಹೇಳುತ್ತಿದ್ದಳು.

ಅದಕ್ಕಾಗಿ ನೀನು ಚಿಂತಿಸಬೇಡ, ಆದದ್ದನ್ನು ಮತ್ತೆ ಸರಿಪಡಿಸಲಿಕ್ಕೆ ಆಗುವುದಿಲ್ಲ. ಆದರೆ ಮುಂದಿನದ್ದನ್ನು ನಿನ್ನ ಇಚ್ಛೆಯನಂತೆ ನಡೆಸು, ಕಳೆದ ಆರು ವರುಷಗಳಿಂದ ನಿನಗಾಗಿ ನಿನ್ನ ಪ್ರೀತಿಗಾಗಿ ಕಾಯುತ್ತಿರುವ, ಬಾಳು ಕೊಟ್ಟ ಶ್ರೀಧರನನ್ನು ಚೆನ್ನಾಗಿ ನೋಡಿಕೋ, ನೀನು ಚೆನ್ನಾಗಿ ಆತನೊಂದಿಗೆ ಬಾಳು. ದೇವರು ನಿನಗೆ ಒಳ್ಳೆದುಮಾಡಲಿ ಎಂದು ಆ ಮುದಿ ಜೀವ ಶ್ರೀಮತಿಯನ್ನು ಹರಸಿತು

ಇದನ್ನೆಲ್ಲಾ ಕೇಳುತ್ತಿದ್ದ ನನಗೆ ಮತ್ತೆ ಕಾಡಿದ್ದು ಬಾಳು ಯಾಕೆ ಹೀಗೆ????

**- ಕಮಲಾತನಯ** (ಕಾಪು ಲಕ್ಷ್ಮೀಕಾಂತ ತಂತ್ರಿ)

# ದೇಶದ ರೈತರಿಗೆ ಅಗತ್ಯ ರಸಗೊಬ್ಬರ ಲಭ್ಯ

## ಯಾವುದೇ ರೀತಿಯ ಭಯ, ಆತಂಕಕ್ಕೆ ಕಾರಣವಿಲ್ಲ: ಕೇಂದ್ರ ಸಚಿವ ಜೆ.ಪಿ.ನಡ್ಡಾ

• ಪ್ರಜೋದಯ ವರದಿ





**ನವದೆಹಲಿ:** ಪಶ್ಚಿಮ ಏಷ್ಯಾದ ಯುದ್ಧ ಪರಿಸ್ಥಿತಿಯ ನಡುವೆಯೂ ದೇಶದಲ್ಲಿ ರೈತರಿಗೆ ಅಗತ್ಯವಿರುವಷ್ಟು ರಸಗೊಬ್ಬರ ಸಂಗ್ರಹ ಲಭ್ಯವಿದ್ದು, ಆತಂಕ ಪಡುವ ಅಗತ್ಯವಿಲ್ಲ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಜೆ.ಪಿ. ನಡ್ಡಾ ಅವರು ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಕೇಳಲಾದ ಪೂರಕ ಪ್ರಶ್ನೆಗೆ ಉತ್ತರಿಸಿದ ಅವರು, ಪಶ್ಚಿಮ ಏಷ್ಯಾ ಯುದ್ಧದ ಹಿನ್ನೆಲೆ ರಸಗೊಬ್ಬರ ಲಭ್ಯತೆ ಕುರಿತು ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದರು. ನಿನ್ನೆ ರಾಜ್ಯಗಳ ಕೃಷಿ ಸಚಿವರೊಂದಿಗೆ ಮಾತುಕತೆ ನಡೆಸಿ ರಸಗೊಬ್ಬರ ಸಂಗ್ರಹ ಸ್ಥಿತಿಯ ಕುರಿತು ಮಾಹಿತಿ ನೀಡಿದ್ದೇನೆ ಎಂದು ಅವರು ಹೇಳಿದರು.

ರೈತರಿಗೆ ಬೇಕಾದಾಗ ರಸಗೊಬ್ಬರ ಲಭ್ಯವಾಗುವಂತೆ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ದೇಶದಲ್ಲಿ ಸಾಕಷ್ಟು ಸಂಗ್ರಹವಿದ್ದು ಯಾವುದೇ ರೀತಿಯ ಭಯ ಅಥವಾ ಆತಂಕಕ್ಕೆ ಕಾರಣವಿಲ್ಲ ಎಂದು ನಡ್ಡಾ ಭರವಸೆ ನೀಡಿದ್ದಾರೆ.

ಮುಂಗಾರು ಹಂಗಾಮಿಗೆ ಸಂಬಂಧಿಸಿದಂತೆ ರಸಗೊಬ್ಬರ ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರ ಹೊಸ ಮಾರುಕಟ್ಟೆಗಳ ನಿಗದಿ ಮಾಡಿಕೊಂಡಿದೆಯೇ ಎಂದು ಕಾಂಗ್ರೆಸ್ ಸದಸ್ಯ ಮನೀಷ್ ತಿವಾರಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮುಂಗಾರಿಗೆ ಬೇಕಾದಷ್ಟು ಸಂಗ್ರಹ ಈಗಾಗಲೇ ಲಭ್ಯವಿದೆ ಎಂದಿದ್ದಾರೆ.

ಇದಲ್ಲದೆ, ರಸಗೊಬ್ಬರ ಉತ್ಪಾದನೆಗೆ ಅಗತ್ಯವಾದ ಕಚ್ಚಾ ವಸ್ತುಗಳಿಗಾಗಿ ಹೊಸ ಮಾರುಕಟ್ಟೆಗಳು ಹಾಗೂ ಪರ್ಯಾಯ ಮೂಲಗಳನ್ನು ಹುಡುಕುವ ದಿಕ್ಕಿನಲ್ಲಿ ಸರ್ಕಾರ ಕಾರ್ಯತಂತ್ರ ರೂಪಿಸಿದೆ ಎಂದು ತಿಳಿಸಿದ್ದಾರೆ.

ಹಡಗು ಸಂಚಾರ ವ್ಯತ್ಯಯ ಮತ್ತು ಪಶ್ಚಿಮ ಏಷ್ಯಾ ಯುದ್ಧದ ಪರಿಣಾಮ ರಸಗೊಬ್ಬರ ಆಮದು ಕುರಿತು ಆತಂಕಗಳು ವ್ಯಕ್ತವಾಗಿವೆ.

ಭಾರತವು ರಸಗೊಬ್ಬರಗಳ ಪ್ರಮುಖ ಆಮದುದಾರ ರಾಷ್ಟ್ರಗಳಲ್ಲಿ ಒಂದಾಗಿದೆ.

## ಇರಾನ್ ಮೇಲೆ ದಾಳಿ ಏ.6ರವರೆಗೆ ಮುಂದೂಡಿಕೆ


**ವಾಷಿಂಗ್ಟನ್:** ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಹಿನ್ನೆಲೆಯಲ್ಲಿ ಇರಾನಿನ ಇಂಧನ ಮೂಲಸೌಕರ್ಯಗಳ ಮೇಲಿನ ದಾಳಿಯನ್ನು ಏ. 6ರವರೆಗೆ ಮುಂದೂಡಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

"ಇರಾನ್ ಸರ್ಕಾರದ ಕೋರಿಕೆಯಂತೆ, ಇಂಧನ ಸ್ಥಾವರ ಮೇಲಿನ ದಾಳಿಯನ್ನು ಏಪ್ರಿಲ್ 6ರ ಸೋಮವಾರದವರೆಗೆ ರಾತ್ರಿ 8 ಗಂಟೆಗೆ ಅನ್ವಯವಾಗುವಂತೆ 10ದಿನ ಮುಂದೂಡಲಾಗಿದೆ. ಅಷ್ಟರೊಳಗೆ 'ಇರಾನ್' ಶಾಂತಿ ಒಪ್ಪಂದಕ್ಕೆ ಬರಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಗತ್ತಿನ ಪ್ರಮುಖ ದೇಶಗಳಿಗೆ ಕಚ್ಚಾತೈಲ ಪೂರೈಕೆ ಮಾಡುವ ನಿರ್ಣಾಯಕ ಹಾರ್ಮುಜ್ ಜಲಸಂಧಿ ತೈಲ ಟ್ಯಾಂಕರ್‌ಗಳಿಗೆ ತೆರೆಯಲು 48 ಗಂಟೆಗಳ ಕಾಲಾವಕಾಶ ನೀಡಿದ್ದರು. ಇಲ್ಲದಿದ್ದರೆ ವಿದ್ಯುತ್ ಸ್ಥಾವರ ನಾಶಮಾಡುವುದಾಗಿ ಬೆದರಿಕೆ ಹಾಕಿದ್ದರು, ಅದರ ಬೆನ್ನಲ್ಲೇ ಇರಾನ್ ಮೇಲಿನ ಗಡುವನ್ನು ಮತ್ತೆ ಎರಡು ಬಾರಿ ವಿಸ್ತರಿಸಿದ್ದಾರೆ.

# ಅಯೋಧ್ಯೆ ರಾಮಮಂದಿರದಲ್ಲಿ ದಿವ್ಯ ಕ್ಷಣ: ಬಾಲ ರಾಮನ ಹಣೆ ಬೆಳಗಿದ ಸೂರ್ಯ ತಿಲಕ!

• ಪ್ರಜೋದಯ ವರದಿ



**ಅಯೋಧ್ಯೆ:** ರಾಮನವಮಿ ಹಬ್ಬದ ಪವಿತ್ರ ಸಂದರ್ಭದಲ್ಲಿ ಅಯೋಧ್ಯೆ ರಾಮ ಮಂದಿರದಲ್ಲಿ ನಡೆದ ಸೂರ್ಯ ತಿಲಕ ಆಚರಣೆ ಈ ಬಾರಿ ಮತ್ತಷ್ಟು ವೈಭವದಿಂದ ನೆರವೇರಿತು.

ಬಾಲ ರಾಮನ ಮೂರ್ತಿಯ ಹಣೆ ಮೇಲೆ ನೇರವಾಗಿ ಸೂರ್ಯ ಕಿರಣಗಳು ತಿಲಕದ ರೂಪದಲ್ಲಿ ಹೊಳೆಯುವ ಕ್ಷಣ ಭಕ್ತರ ಮನಸ್ಸಿನಲ್ಲಿ ದಿವ್ಯ ಅನುಭವವನ್ನು ಮೂಡಿಸಿತು.

ಶ್ರೀರಾಮನ ಹಣೆಯ ಮೇಲಿನ ಸೂರ್ಯ ತಿಲಕವು ಸುಮಾರು 4 ನಿಮಿಷಗಳ ಕಾಲ ಇತ್ತು ಮತ್ತು ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ಅದ್ಭುತ ದೃಶ್ಯದ ಹಿಂದೆ ಸುಧಾರಿತ ವೈಜ್ಞಾನಿಕ ತಂತ್ರಜ್ಞಾನವೂ ಅಡಗಿದೆ. ದೇವಸ್ಥಾನದ ಮೇಲ್ಭಾಗದಲ್ಲಿ ಅಳವಡಿಸಿದ ವಿಶೇಷ ಲೆನ್ಸ್‌ಗಳು ಮತ್ತು ಕನ್ನಡಿ ವ್ಯವಸ್ಥೆಗಳ ಮೂಲಕ ಸೂರ್ಯನ ಕಿರಣಗಳನ್ನು ನಿಖರವಾಗಿ ಗರ್ಭಗುಡಿಯೊಳಗೆ ಬರುವಂತೆ ತಂತ್ರವನ್ನು ರೂಪಿಸಲಾಗಿದೆ.

ಈ ವ್ಯವಸ್ಥೆಯು ಸೂರ್ಯನ ಸ್ಥಿತಿಗತಿಗಳನ್ನು ಲೆಕ್ಕಹಾಕಿ, ಸರಿಯಾದ ಸಮಯದಲ್ಲಿ ಕಿರಣಗಳು ರಾಮನ ಮೂರ್ತಿಯ ಹಣೆಯ ಮೇಲೆ ಬೀಳುವಂತೆ ಮಾಡುತ್ತದೆ. ಈ ಬಾರಿ ಸುಮಾರು 3 ರಿಂದ 4 ನಿಮಿಷಗಳವರೆಗೆ ಈ ದಿವ್ಯ ತಿಲಕ ಸ್ಪಷ್ಟವಾಗಿ ಕಾಣಿಸಿಕೊಂಡಿತು. ಈ ವೇಳೆ ಇಡೀ ಅಯೋಧ್ಯೆ ನಗರವೇ ಹಬ್ಬದ ವಾತಾವರಣದಲ್ಲಿ ಮಿಂದೆದಿತು. ಎಲ್ಲೆಲ್ಲೂ ರಾಮನ ಸ್ಮರಣೆ ಮುಗಿಲು ಮುಟ್ಟಿತ್ತು.

ರಾಮನವಮಿ ಪ್ರಯುಕ್ತ ದೇವಸ್ಥಾನವನ್ನು ಆಕರ್ಷಕವಾಗಿ ಅಲಂಕರಿಸಲಾಗಿದ್ದು, ದೇಶದ ವಿವಿಧ ರಾಜ್ಯಗಳಿಂದ ಮಾತ್ರವಲ್ಲದೆ ವಿದೇಶಗಳಿಂದಲೂ ಭಕ್ತರು ಆಗಮಿಸಿ ಸೂರ್ಯ ತಿಲಕದ ಅಪರೂಪದ ಕ್ಷಣವನ್ನು ಕಣ್ತುಂಬಿಕೊಂಡರು.

ಸೂರ್ಯ ತಿಲಕ ಕಾರ್ಯಕ್ರಮವು ರಾಮನ ಸೂರ್ಯವಂಶೀಯ ಪರಂಪರೆಯನ್ನು ಸ್ಮರಿಸುವ ಮಹತ್ವದ ಆಚರಣೆಯಾಗಿದೆ. ಭಕ್ತರ ನಂಬಿಕೆ ಪ್ರಕಾರ, ಈ ಕ್ಷಣವನ್ನು ನೋಡುವುದು ಶುಭಕರವೆಂದು ಪರಿಗಣಿಸಲಾಗುತ್ತದೆ. ಈ ಹಿನ್ನೆಲೆ ಸಾವಿರಾರು ಭಕ್ತರು ಈ ದಿವ್ಯ ಕ್ಷಣಕ್ಕಾಗಿ ಗಂಟೆಗಳ ಕಾಲ ಕಾಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

# ಅದ್ದೂರಿಯಾಗಿ ನಡೆದ ರಾಮೋತ್ಸವ

• ಪ್ರಜೋದಯ ವರದಿ



**ಸಕಲೇಶಪುರ:** ಶ್ರೀ ರಾಮನವಮಿ ನಿಮಿತ್ತ ಪಟ್ಟಣದ ಕುಶಾಲನಗರ ಬಡಾವಣೆಯಲ್ಲಿ ಹಿಂದೂ ಹಿತರಕ್ಷಣಾ ವೇದಿಕೆಯ ವತಿಯಿಂದ ಹಮ್ಮಿಕೊಂಡಿದ್ದ ರಾಮೋತ್ಸವ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು.

ಬೆಳಿಗ್ಗೆ 10 ಗಂಟೆಗೆ ಶ್ರೀ ರಾಮ ತಾರಕ ಮಂತ್ರ ಘೋಷಗಳೊಂದಿಗೆ ಧಾರ್ಮಿಕ ವಿಧಿ- ವಿಧಾನಗಳು ಆರಂಭಗೊಂಡವು. ಭಕ್ತಿಭಾವದಿಂದ ನಡೆದ ವಿಶೇಷ ಪೂಜಾ ಕಾರ್ಯಕ್ರಮಗಳು ಮಧ್ಯಾಹ್ನ 11:30ಕ್ಕೆ ಸಂಪನ್ನಗೊಂಡವು. ನಂತರ ಆಗಮಿಸಿದ್ದ ನೂರಾರು ಭಕ್ತಾದಿಗಳಿಗೆ ಪಾನಕ, ಕೋಸಂಬರಿ ಹಾಗೂ ಲಘು ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಮಧ್ಯಾಹ್ನ 2 ಗಂಟೆಯ ಸುಮಾರಿಗೆ ಕಾರ್ಯಕ್ರಮವು ಸಮಾಪ್ತಿಗೊಂಡಿತು.

ಕಾರ್ಯಕ್ರಮದಲ್ಲಿ ಚಂದ್ರಶೇಖರ್, ಹಿಂದೂ ಮುಖಂಡರಾದ ರಘು ಸಕಲೇಶಪುರ, ಸೋಮಶೇಖರ್, ಹಿಂದೂ ಹಿತರಕ್ಷಣಾ ವೇದಿಕೆಯ ದಿಲೀಪ್ ಕುಶಾಲನಗರ, ರವಿ ಹೆಬ್ಬಸಾಲೆ, ವಿಕಾಸ್, ಕೌಶಿಕ್ ಹೆಚ್.ಎಂ., ಶಿವು ಜಿಪ್ಪಿ, ಪ್ರದೀಪ್ ಪೂಜಾರಿ, ಜತೀನ್ ಕುಮಾರ್, ಶ್ರೀಜಿತ್‌ಗೌಡ, ವಿಜಿತ್‌ಗೌಡ, ಸಂತೋಷ್, ರಘು, ಚಂದ್ರಶೇಖರ್, ಹಾಗೂ ವೇದಿಕೆಯ ಹಲವಾರು ಕಾರ್ಯಕರ್ತರು ಉಪಸ್ಥಿತರಿದ್ದರು.

# ಗ್ರಾ.ಪಂ.ಗಳ ವ್ಯವಸ್ಥೆ ಅರಿತು ಅಭಿವೃದ್ಧಿಗೆ ಶ್ರಮಿಸಬೇಕು

• ಪ್ರಜೋದಯ ವರದಿ



**ಹಾಸನ:** ಸರ್ಕಾರದ ಯೋಜನೆಗಳು ಜನರಿಗೆ ತಲುಪಲು ಪಂಚಾಯತ್ ರಾಜ್ ವ್ಯವಸ್ಥೆ ಪ್ರಮುಖವಾಗಿದ್ದು, ವಿದ್ಯಾರ್ಥಿಗಳು ಈ ವ್ಯವಸ್ಥೆಯ ಬಗ್ಗೆ ತಿಳಿದುಕೊಂಡು ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಬೇಲೂರು ವೈ.ಡಿ.ಡಿ. ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಕೆ.ಟಿ.ನಾಗೇಂದ್ರಪ್ಪ ಹೇಳಿದರು.

ನಗರದ ಆರ್.ಸಿ.ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐ.ಕ್ಯೂ.ಎ.ಸಿ. ಘಟಕ ಹಾಗೂ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಶುಕ್ರವಾರ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಗ್ರಾಮಗಳ ಅಭಿವೃದ್ಧಿಗೆ ಪಂಚಾಯತ್ ರಾಜ್ ವ್ಯವಸ್ಥೆ ಪರಿಶ್ರಮಿಸುತ್ತಿದ್ದು, ಕಾರ್ಯಾಂಗದ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಣೆ ಮಾಡುವವರು ಈ ವವ್ಯಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಗ್ರಾಮ ಪಂಚಾಯಿತಿ, ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿ ಹಂತದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಣೆ ಮಾಡಿದರೆ ಹಳ್ಳಿಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಗ್ರಾಮಗಳ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ದೊಡ್ಡದಿದ್ದು, ಗ್ರಾಮ ಪಂಚಾಯಿತಿ ವ್ಯವಸ್ಥೆಯ ಬಗ್ಗೆ ತಿಳಿದುಕೊಂಡು ವಿದ್ಯಾರ್ಥಿ ದಿಸೆಯಿಂದಲೇ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಅವರು ಮಾತನಾಡಿ, ನಮ್ಮ ದೇಶದ ಶಕ್ತಿಯೇ ಗ್ರಾಮಗಳು ಆ ಗ್ರಾಮಗಳ ಅಭಿವೃದ್ಧಿಗೆ ಪಂಚಾಯತ್ ರಾಜ್ ವ್ಯವಸ್ಥೆ ಬಹಳ ಮುಖ್ಯ ನಮ್ಮ ಸಂವಿಧಾನದ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರು ಸಮಾನತೆ, ನ್ಯಾಯ ಮತ್ತು ಸ್ವಾತಂತ್ರ್ಯಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ. ಅವರ ಕನಸು ಪ್ರತಿಯೊಬ್ಬ ನಾಗರೀಕನಿಗೂ ಸಮಾನ ಹಕ್ಕು ಸಿಗಬೇಕು ಎಂಬುದಾಗಿತ್ತು ಎಂದು ಹೇಳಿದರು.

ಪಂಚಾಯತ್‌ರಾಜ್ ವ್ಯವಸ್ಥೆ ಕೂಡ ಇದೇ ತತ್ವದ ಮೇಲೆ ನಿಂತಿದೆ, ನೀವು ಇಂದು ಕಲಿಯುವ ವಿಷಯಗಳು ನಾಳಿನ ಸಮಾಜವನ್ನು ರೂಪಿಸುತ್ತೇವೆ. ಗ್ರಾಮ ಪಂಚಾಯತ್‌ಗಳು ಶಿಕ್ಷಣ, ಆರೋಗ್ಯ, ಸ್ವಚ್ಛತೆ, ನೀರು ಮೊದಲಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತವೆ. ನೀವು ಇದರ ಬಗ್ಗೆ ತಿಳಿದುಕೊಂಡು ನಿಮ್ಮ ಊರಿನ ಅಭಿವೃದ್ಧಿಗೆ ಕಾರಣವಾಗಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಮಾರ್ಗವನ್ನು ಅನುಸರಿಸಿ ಎಂದು ಹೇಳಿದರು.

ಐ.ಕ್ಯೂ.ಎ.ಸಿ. ಸಂಚಾಲಕ ಜಿ.ಆರ್.ಮೋಹನ್ ಕುಮಾರ್, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಸುನೀತ, ಉಪನ್ಯಾಸಕ ಎಚ್. ಡಿ. ಲೋಕೇಶ್ ಹಾಗೂ ಇನ್ನಿತರರು ಹಾಜರಿದ್ದರು.

# ಶ್ರೀ ರಾಮನವಮಿ ವಿಶೇಷ ಪೂಜೆ -ನೂತನ ರಥಕ್ಕೆ ಚಾಲನೆ

## ಸೀತಾರಾಮಾಂಜನೇಯ ಸ್ವಾಮಿ ದೇಗುಲದಲ್ಲಿ ಭಕ್ತರ ಸಂಭ್ರಮ । ಮುತ್ತೈದೆಯರಿಂದ ಜೋಗುಳ ಹಾಡು

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದ ದೇವಸ್ಥಾನ ರಸ್ತೆಯ ಸೀತಾರಾಮಾಂಜನೇಯ ಸ್ವಾಮಿ ದೇಗುಲದಲ್ಲಿ 52ನೇ ವರ್ಷದ ಶ್ರೀ ರಾಮನವಮಿ ಹಬ್ಬವನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ನೂತನವಾಗಿ ನಿರ್ಮಿಸಲಾದ ಶ್ರೀರಾಮನ ರಥಕ್ಕೆ ಚಾಲನೆ ನೀಡಲಾಗಿದ್ದು, ಭಕ್ತರಲ್ಲಿ ವಿಶೇಷ ಸಂಭ್ರಮ ಮೂಡಿಸಿತು.

ಮುಂಜಾನೆದಿಂದಲೇ ದೇಗುಲದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಂಡವು. ಪ್ರಧಾನ ಅರ್ಚಕರಾದ ನಂಜುಂಡಸ್ವಾಮಿ ಹಾಗೂ ನಾಗಭೂಷಣ್ ಅವರ ನೇತೃತ್ವದಲ್ಲಿ ಶ್ರೀರಾಮ, ಹನುಮಂತ ಹಾಗೂ ನವಗ್ರಹ ದೇವತೆಗಳಿಗೆ ಅಭಿಷೇಕ, ಮಹಾಭಿಷೇಕ ನೆರವೇರಿಸಲಾಯಿತು. ನಂತರ ಬಾಲರಾಮ ಹಾಗೂ ಲಕ್ಷ್ಮಣರ ಮೂರ್ತಿಯನ್ನು ತೊಟ್ಟಿಲಲ್ಲಿ ಮಲಗಿಸಿ, ಮುತ್ತೈದೆಯರಿಂದ ಜೋಗುಳ ಹಾಡಿಸುವ ಮೂಲಕ ಸಂಪ್ರದಾಯಬದ್ಧವಾಗಿ ಆಚರಣೆ ನಡೆಯಿತು.

ಈ ವೇಳೆ ದೇಗುಲದ ಪ್ರಧಾನರಾದ ರಘುಪತಿ ಹತ್ವಾರ್ ಮಾತನಾಡಿ, ನಮ್ಮ ಪೂರ್ವಿಕರಿಂದಲೇ ಈ ದೇವಾಲಯದಲ್ಲಿ ರಾಮನವಮಿ ಹಾಗೂ ಹನುಮ ಜಯಂತಿ ಆಚರಣೆ ನಡೆದುಕೊಂಡು ಬಂದಿದೆ. ಭಕ್ತರ ಸಹಕಾರದಿಂದ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ. ಸುಮಾರು 5 ಲಕ್ಷ ರೂಪಾಯಿ ವೆಚ್ಚದಲ್ಲಿ ನಮ್ಮ ಕುಟುಂಬದ ಸಹಕಾರದಿಂದ ನೂತನ ರಥವನ್ನು ನಿರ್ಮಿಸಿದ್ದೇವೆ. ಪ್ರತೀ ವಾರವೂ ವಿಶೇಷ ರಥೋತ್ಸವವನ್ನು ನಡೆಸುವ ಯೋಜನೆ ಇದ್ದು, ಭಕ್ತರ ಸಹಕಾರ ಅಗತ್ಯ ಎಂದು ತಿಳಿಸಿದರು.

ಕೇಶವಮೂರ್ತಿ ಹತ್ವಾರ್ ಮಾತನಾಡಿ, ಪ್ರತಿ ವರ್ಷ ಹನುಮ ಜಯಂತಿ ಸೇರಿದಂತೆ ಎಲ್ಲಾ ಹಬ್ಬಗಳಲ್ಲೂ ಇಲ್ಲಿ ವಿಶೇಷ ಪೂಜೆಗಳು ನಡೆಯುತ್ತಿವೆ. ಹತ್ವಾರ್ ವಂಶಸ್ಥರು ದೇವಾಲಯದ ಜೀರ್ಣೋದ್ಧಾರ ಹಾಗೂ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಈ ವರ್ಷ ನೂತನ ರಥದ ವ್ಯವಸ್ಥೆ ಮಾಡಿರುವುದು ಭಕ್ತರಿಗೆ ಮತ್ತಷ್ಟು ಅನುಕೂಲಕರವಾಗಿದೆ ಎಂದು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಉಪೇಂದ್ರ, ಮುರಳೀಧರ್, ಶ್ರೀಪತಿ, ರಾಘವೇಂದ್ರ, ಕೆಡಿಪಿ ಸದಸ್ಯೆ ಸೌಮ್ಯ ಆನಂದ್ ವಾಸುದೇವ ಧನ್ಯ, ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಎಂ. ದಯಾನಂದ್ ಹಾಗೂ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ರಾಘವೇಂದ್ರ ಹೊಳ್ಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಂತ್ಯದಲ್ಲಿ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

# ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಜನವರಿ 2027ನೇ ಸಾಲಿನ ಅಧಿವೇಶನಕ್ಕಾಗಿ ಉತ್ತರಾಖಂಡ ರಾಜ್ಯದ ಡೆಹರಡೂನ್‌ನಲ್ಲಿರುವ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜಿನಲ್ಲಿ 8ನೇ ತರಗತಿಗಾಗಿ ಪ್ರವೇಶ ಬಯಸುವ ಕರ್ನಾಟಕ ರಾಜ್ಯದ ಬಾಲಕ ಮತ್ತು ಬಾಲಕಿಯರಿಗೆ ಅರ್ಹತಾ ಪ್ರವೇಶ ಪರೀಕ್ಷೆಯನ್ನು ಜೂ.07 ರಂದು ಬೆಂಗಳೂರು ಕೇಂದ್ರದಲ್ಲಿ ನಿಗದಿಪಡಿಸಲಾಗಿದೆ.

ಅರ್ಜಿ ಸಲ್ಲಿಕೆಗೆ ಏ.4 ಕೊನೆಯ ದಿನಾಂಕ ಹೆಚ್ಚಿನ ಮಾಹಿಗಾಗಿ ದೂರವಾಣಿ ಸಂಖ್ಯೆ: 080-25589456 ಅಥವಾ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್, ಡೆಹರಾಡೂನ್ ವೆಬ್ ಸೈಟ್ www.rimc.gov.in ಅನ್ನು ಸಂಪರ್ಕಿಸುವಂತೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

**ಹಾಸನ:** ಪ್ರವಾಸೋದ್ಯಮ ಇಲಾಖೆಯಿಂದ 2025-26 ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ವಿಷಯದ ಬಗ್ಗೆ ಒಂದು ತಿಂಗಳ ಕೌಶಲ್ಯಾಭಿವೃದ್ಧಿ ವಾಣಿಜ್ಯೋದ್ಯಮ ಕಾರ್ಯಕ್ರಮ ತರಬೇತಿಯನ್ನು ನೀಡುವುದು ಹಾಗೂ ತರಬೇತಿ ಪಡೆದ ಅರ್ಹ ಅಭ್ಯರ್ಥಿಗಳಿಗೆ ಪ್ರವಾಸಿ ತಾಣಗಳಲ್ಲಿ ಮೊಬೈಲ್ ಕ್ಯಾಂಟೀನ್ ನಡೆಸಲು 5. ಲಕ್ಷ ರೂ.ಗಳ ಸಹಾಯಧನ ನೀಡಲು ಉದ್ದೇಶಿಸಲಾಗಿದೆ.

ತರಬೇತಿ ಹಾಗೂ ಸಹಾಯಧನಕ್ಕಾಗಿ ಹಾಸನ ಜಿಲ್ಲೆಯ ಪರಿಶಿಷ್ಟ ಜಾತಿಗೆ-07 ಮತ್ತು ಪರಿಶಿಷ್ಟ ಪಂಗಡ -5 ಸೇರಿದಂತೆ ಒಟ್ಟು 12 ಅಭ್ಯರ್ಥಿಗಳಿಗೆ ಭೌತಿಕ ಗುರಿಯನ್ನು ಪ್ರಸ್ತುತ ಸಾಲಿನಲ್ಲಿ ನಿಗಧಿಪಡಿಸಿದೆ. ವಾಣಿಜ್ಯೋದ್ಯಮ ಕಾರ್ಯಕ್ರಮ, 10ನೇ ತರಗತಿ, 20 ರಿಂದ 55 ವರ್ಷಕ್ಕಿಂತ ಮೇಲ್ಪಟ್ಟವರು, ಪರಿಶಿಷ್ಟ ಜಾತಿ 7, ಪರಿಶಿಷ್ಟ ಪಂಗಡ 5, ತರಬೇತಿಯನ್ನು ವಸತಿ ಸಹಿತ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳ ಮೂಲಕ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಅರ್ಹ ಹಾಗೂ ಅನುಭವಿಗಳಿಗೆ ಯೋಜನೆಯಡಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ದಾಖಲೆಗಳೊಂದಿಗೆ ದಿನಾಂಕ: 08.04.2026ರ ಸಂಜೆ 4:30ರ ಒಳಗಾಗಿ ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಹಾಸನ, ಸುಮುಖ ಯಾತ್ರಿ ನಿವಾಸ ಕಟ್ಟಡ, ಎ.ವಿ.ಕೆ. ಕಾಲೇಜು ರಸ್ತೆ, ಹಾಸನ ಇವರಿಗೆ ದ್ವಿ-ಪ್ರತಿಯಲ್ಲಿ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08172-268862 ಸಂಪರ್ಕಿಸಿ ಪಡೆಯಬಹುದಾಗಿದೆ.

# ಕಾಳೇನಹಳ್ಳಿಯಲ್ಲಿ ಶ್ರೀ ರಾಮನವಮಿ ಆಚರಣೆ



**ಹಾಸನ:** ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ (ರಿ) ಕರ್ನಾಟಕ ಹಾಗೂ ಶ್ರೀರಾಮ ಸೇನೆ ವತಿಯಿಂದ ಅರಕಲಗೂಡು ತಾಲ್ಲೂಕು ರಾಮನಾಥಪುರ ಹೋಬಳಿ ಕಾಳೇನಹಳ್ಳಿ ಗ್ರಾಮದಲ್ಲಿ ಶ್ರೀ ರಾಮನವಮಿ ಆಚರಿಸಲಾಯಿತು.

ಮಜ್ಜಿಗೆ, ಪಾನಕ ಮತ್ತು ಕೋಸಂಬರಿಯನ್ನು ರಾಮನನ್ನು ನೆನೆಯುತ್ತಾ ಭಕ್ತಾದಿಗಳಿಗೆ ವಿತರಿಸಲಾಯಿತು. ಸಮಾರಂಭದಲ್ಲಿ ಹಾಸನ ಜಿಲ್ಲೆಯ ಶ್ರೀರಾಮ ಸೇನೆಯ ಕಾರ್ಯಾಧ್ಯಕ್ಷ ಪುನೀತ್, ಅರಕಲಗೂಡು ಅಧ್ಯಕ್ಷ ಮಂಜು, ಹಾಸನ ಜಿಲ್ಲಾ ಸಹ ಕಾರ್ಯದರ್ಶಿ, ಅಮಿತ್ ಕೆ.ಎನ್. ಅವರು ಹಾಗೂ ಊರಿನ ಮುಖಂಡರು ಭಾಗವಹಿಸಿದ್ದರು.

# ಬೇಲೂರು ಚೆನ್ನಿಗನ ಜಾತ್ರಾ ಮಹೋತ್ಸವಕ್ಕೆ ಸಜ್ಜು

• ಪ್ರಜೋದಯ ವರದಿ



**ಬೇಲೂರು:** ವಿಶ್ವಪ್ರಸಿದ್ಧ ಚನ್ನಕೇಶವ ದೇವಸ್ಥಾನ ಜಾತ್ರಾಮಹೋತ್ಸವ ಹಿನ್ನಲೆಯಲ್ಲಿ ಪಟ್ಟಣದಲ್ಲಿ ಸಿದ್ಧತೆಗಳು ಜೋರಾಗಿದ್ದು, ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಅವರು ಪೂರ್ವ ನಿಯೋಜಿತವಾಗಿ ಸ್ಥಳ ವೀಕ್ಷಣೆ ನಡೆಸಿ ವಿವಿಧ ವ್ಯವಸ್ಥೆಗಳ ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಅವರು, ಜಾತ್ರೆಯನ್ನು ಪ್ರತಿವರ್ಷದಂತೆ ಈ ಬಾರಿಯೂ ಅದ್ದೂರಿಯಾಗಿ ಆಚರಿಸಲು ಎಲ್ಲ ನಾಗರಿಕರು ಸಹಕರಿಸಬೇಕು. ವಿಶೇಷವಾಗಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ದೇವಸ್ಥಾನದ ಸುತ್ತಮುತ್ತ ಸ್ವಚ್ಛತಾ ಕಾರ್ಯಗಳನ್ನು ವೇಗವಾಗಿ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಭಕ್ತರ ಅನುಕೂಲಕ್ಕಾಗಿ ದೇವಸ್ಥಾನ ಪ್ರದೇಶ ಹಾಗೂ ಕಲ್ಯಾಣಿ ಸುತ್ತಮುತ್ತ ಸುಮಾರು 25-30 ಕಡೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ. ಜೊತೆಗೆ 18 ಕಡೆಗಳಲ್ಲಿ ಸ್ಟ್ರೀಟ್ ಲೈಟ್ಸ್ ಅಳವಡಿಕೆ ಹಾಗೂ ದುರಸ್ತಿ ಕಾರ್ಯ ನಡೆಯುತ್ತಿದ್ದು, ಹಾನಿಗೊಳಗಾದ ಕವರಿಂಗ್ ಸ್ಲ್ಯಾಬ್‌ಗಳನ್ನು ತುರ್ತಾಗಿ ಸರಿಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಕಸ ನಿರ್ವಹಣೆಗೆ ದೇವಸ್ಥಾನದ ಸುತ್ತಮುತ್ತ 10-15 ಕಡೆಗಳಲ್ಲಿ ಡಸ್ಟ್ ಬಿನ್‌ಗಳನ್ನು ಅಳವಡಿಸಲಾಗಿದ್ದು, ಸಾರ್ವಜನಿಕರು ಕಸವನ್ನು ಎಲ್ಲೆಂದರಲ್ಲಿ ಎಸೆಯದೆ ನಿಗದಿತ ಸ್ಥಳದಲ್ಲೇ ಹಾಕಬೇಕು. ಕಲ್ಯಾಣಿ ಪ್ರದೇಶದಲ್ಲಿಯೂ ಇದೇ ರೀತಿಯ ವ್ಯವಸ್ಥೆ ಮಾಡಲಾಗಿದೆ. ಭಕ್ತರ ಸ್ನಾನಕ್ಕೆ ಬೇಕಾದಷ್ಟು ನೀರು ಒದಗಿಸುವುದರ ಜೊತೆಗೆ ತೆಪ್ಪೋತ್ಸವ ವೇಳೆಗೆ ಕಲ್ಯಾಣಿಯನ್ನು ಸಂಪೂರ್ಣ ನೀರಿನಿಂದ ತುಂಬಿಸುವ ಯೋಜನೆ ಇದೆ ಎಂದು ಹೇಳಿದರು.

ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವಂತೆ ವ್ಯಾಪಾರಸ್ಥರಿಗೆ ಸೂಚನೆ ನೀಡಲಾಗಿದ್ದು, ನಿಯಮ ಉಲ್ಲಂಘಿಸಿದಲ್ಲಿ ದಂಡ ವಿಧಿಸಲಾಗುತ್ತದೆ ಎಂದು ಎಚ್ಚರಿಸಿದರು. ಬಟ್ಟೆ ಚೀಲಗಳ ಬಳಕೆಗೆ ಉತ್ತೇಜನ ನೀಡಿದರು.

ಜಾತ್ರಾ ಅವಧಿಯಲ್ಲಿ ಶೌಚಾಲಯಗಳನ್ನು ಬೆಳಿಗ್ಗೆ 5ರಿಂದ ರಾತ್ರಿ 12-1ರವರೆಗೆ ತೆರೆಯಲಾಗುತ್ತಿದ್ದು, ದಿನಕ್ಕೆ ಮೂರು ಬಾರಿ ನೀರು ತುಂಬಿಸುವ ಮೂಲಕ ಸ್ವಚ್ಛತೆ ಕಾಪಾಡಲಾಗುತ್ತದೆ. ದೇವಸ್ಥಾನದ ಸುತ್ತ ವಾಹನ ನಿಲುಗಡೆ ನಿಷೇಧವಾಗಿದ್ದು, ನಿಗದಿತ ಪಾರ್ಕಿಂಗ್ ಸ್ಥಳಗಳನ್ನೇ ಬಳಸಬೇಕು ಎಂದು ತಿಳಿಸಿದರು. ಈ ಸಂಬಂಧ ಪೊಲೀಸ್ ಇಲಾಖೆ ಸಹ ಸಹಕರಿಸಲಿದೆ ಎಂದರು.

ಮುಖ್ಯಾಧಿಕಾರಿ ಬಸವರಾಜು ಶಿಗ್ಗಾವಿ, ಆರೋಗ್ಯ ಅಧಿಕಾರಿ ಲೋಹಿತ್ ಸೇರಿದಂತೆ ಇತರರು ಇದ್ದರು.

# ಮಾ.30ಕ್ಕೆ ಉಚಿತ ಆರೋಗ್ಯ ಶಿಬಿರ

• ಪ್ರಜೋದಯ ವರದಿ

**ಹಾಸನ:** ಭಗವಾನ್ 1008 ಶ್ರೀ ಮಹಾವೀರ ತೀರ್ಥಂಕರರ 2625ನೇ ಜಯಂತಿ ಮಹೋತ್ಸವ ಹಾಗೂ ಶ್ರೀ ಮಹಾವೀರ ಜಿನ ಮಂದಿರ ಮತ್ತು ಮೂರ್ತಿ ಪ್ರತಿಷ್ಠಾಪನಾ 23ನೇ ವಾರ್ಷಿಕೋತ್ಸವ ಸಮಾರಂಭ ಹಾಗೂ ಶ್ರೀ ಮಹಾವೀರ ಎಜುಕೇಶನಲ್ ಅಂಡ್ ಚಾರಿಟೇಬಲ್ ಟ್ರಸ್ಟ್, ಹಾಸನ ವತಿಯಿಂದ ರವೀಂದ್ರನಗರದಲ್ಲಿರುವ ಮಹಾವೀರ ಭವನದಲ್ಲಿ ಮಾ.30 ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಪರಮ ಪೂಜ್ಯ ಜಗದ್ಗುರು ಸ್ವಸ್ತಿ ಶ್ರೀ ಡಾ|| ಶ್ರೀಮದ್ದೇವೇಂದ್ರ ಕೀರ್ತಿ ಭಟ್ಟಾರಕರ ಮಹಾ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ನಡೆಯಲಿದೆ. ಬೆಳಿಗ್ಗೆ 5:30 ರಿಂದ ಪಂಚಾಮೃತ ಅಭಿಷೇಕ, ಬೆಳಿಗ್ಗೆ 8:00ಕ್ಕೆ ಪುಷ್ಪಾಲಂಕೃತ ಪಲ್ಲಕ್ಕಿ ಉತ್ಸವ, 11:30ಕ್ಕೆ ವಿಶೇಷ ಅಭಿಷೇಕ ಹಾಗೂ ಮಧ್ಯಾಹ್ನ 3:30ಕ್ಕೆ ದಿವ್ಯ ರಥೋತ್ಸವ ನಡೆಯಲಿದೆ. ಸಂಜೆ ಮಹಾ ಮಂಗಳಾರತಿ ಮತ್ತು ಎಲ್.ಇ.ಡಿ ಪರದೆಯ ಮೇಲೆ ಶ್ರೀ ಮಹಾವೀರ ತೀರ್ಥಂಕರರ ದೃಷ್ಯಾವಳಿಗಳ ಪ್ರದರ್ಶನವೂ ಇರಲಿದೆ.


ಶಿಬಿರದಲ್ಲಿ ಬಿ.ಪಿ, ಶುಗರ್ ಪರೀಕ್ಷೆ, ರಕ್ತಗುಂಪು ಪರೀಕ್ಷೆ, ಹಿಮೋಗ್ಲೋಬಿನ್ ತಪಾಸಣೆ, ದಂತ ಹಾಗೂ ನೇತ್ರ ತಪಾಸಣೆ ಸೇರಿದಂತೆ ಪುರುಷ ಹಾಗೂ ಮಹಿಳಾ ವೈದ್ಯರಿಂದ ಸಾಮಾನ್ಯ ಕಾಯಿಲೆಗಳ ಪರಿಶೀಲನೆ ಮತ್ತು ಸಲಹೆಗಳನ್ನು ಉಚಿತವಾಗಿ ನೀಡಲಾಗುತ್ತದೆ.

ಸಾರ್ವಜನಿಕರು ಹಾಗೂ ಜೈನ ಭಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಆಯೋಜಕರು ಮನವಿ ಮಾಡಿದ್ದಾರೆ.

## ಉರಿಯುವ ಮನೆಯಲ್ಲಿ ಬಾಡಿಗೆ ರೂಂ ಬೇಡ; ಮಧ್ಯಸ್ಥಿಕೆಗೆ ಬಂದ ಪಾಪಿಸ್ತಾನದ ಮಾನ ಹರಾಜು ಹಾಕಿದ ಅಮೆರಿಕ!

# ಮೊದಲು ಪಾಕ್ ತನ್ನ ಮನೆಯ ಬೆಂಕಿಯನ್ನು ನಂದಿಸಿಕೊಳ್ಳಲಿ

• ಪ್ರಜೋದಯ ವರದಿ



- ಅಮೆರಿಕ ಮತ್ತು ಇರಾನ್ ನಡುವೆ ಮಧ್ಯಸ್ಥಿಕೆ ವಹಿಸುವುದಾಗಿ ಹೇಳಿದ ಪಾಕಿಸ್ತಾನ.
- ಪಾಕಿಸ್ತಾನದ ಮಧ್ಯಸ್ಥಿಕೆ ಆಫರ್‌ನ್ನು ಹಾಸ್ಯಾಸ್ಪದ ಎಂದ ಅಮೆರಿಕದ ರಕ್ಷಣಾ ತಜ್ಞ.
- ಪಾಕಿಸ್ತಾನ ಮೊದಲು ತನ್ನ ಮನೆ ನೋಡಿಕೊಳ್ಳಲಿ ಎಂದ ಡೌಗ್ಲಾಸ್ ಮ್ಯಾಕ್‌ಗ್ರೆಗರ್.

**ವಾಷಿಂಗ್ಟನ್:** ಹಾಸಿಗೆ ಇದ್ದಷ್ಟು ಕಾಲುಚಾಚು ಎನ್ನುತ್ತಾರೆ ಹಿರಿಯರು. ಆದರೆ ಜಾಗತಿಕ ವೇದಿಕೆಯಲ್ಲಿ ತನ್ನ ಶಕ್ತಿ ಎಷ್ಟು ಎಂಬ ಅರಿವೇ ಇಲ್ಲದ ಪಾಕಿಸ್ತಾನ, ಅನವಶ್ಯಕವಾಗಿ ತನ್ನ ಅಸ್ತಿತ್ವ ಸಾಬೀತುಪಡಿಸಲು ಪ್ರಯತ್ನಿಸುತ್ತದೆ. ಸಂಘರ್ಷದಲ್ಲಿ ನಿರತವಾಗಿರುವ ಅಮೆರಿಕ ಮತ್ತು ಇರಾನ್ ನಡುವೆ ಮಧ್ಯಸ್ಥಿಕೆವಹಿಸಲು ಸಿದ್ಧ ಎಂದು ಹೇಳುವ ಮೂಲಕ, ಪಾಕಿಸ್ತಾನ ಜಾಗತಿಕ ಮಟ್ಟದಲ್ಲಿ ನಗೆಪಾಟಲಿಗೆ ಗುರಿಯಾಗಿದೆ. ಈ ಕುರಿತು ಪಾಕಿಸ್ತಾನದ ಕಾಲೆಳೆದಿರುವ ಅಮೆರಿಕದ ರಕ್ಷಣಾ ತಜ್ಞ ಡೌಗ್ಲಾಸ್ ಮ್ಯಾಕ್‌ಗ್ರೆಗರ್, ಪಾಕಿಸ್ತಾನ ಮೊದಲು ತನ್ನ ಯೋಗಕ್ಷೇಮ ನೋಡಿಕೊಳ್ಳಲಿ ಎಂದು ವ್ಯಂಗ್ಯವಾಡಿದ್ದಾರೆ.

ಆದರೆ ಅಮೆರಿಕ-ಇರಾನ್ ನಡುವೆ ಮಧ್ಯಸ್ಥಿಕೆವಹಿಸಲು ಬಂದ ಪಾಕಿಸ್ತಾನ ಅದೇ ಅಮೆರಿಕದಿಂದ ಅಪಮಾನಕ್ಕೆ ಗುರಿಯಾಗಿದೆ. ಯುಎಸ್ ರಕ್ಷಣಾ ತಜ್ಞ ಮತ್ತು ಭೌಗೋಳಿಕ ರಾಜಕೀಯ ಸಲಹೆಗಾರ ಡೌಗ್ಲಾಸ್ ಮ್ಯಾಕ್‌ಗ್ರೆಗರ್ ಅವರು, ಪಾಕಿಸ್ತಾನದ ಸಂಧಾನಕಾರ ಆಫರ್‌ನ್ನು ಹಾಸ್ಯಾಸ್ಪದ ಮತ್ತು ಅಸಂಬದ್ಧತೆ ಎಂದು ಲೇವಡಿ ಮಾಡಿದ್ದಾರೆ.

ಮಧ್ಯಪ್ರಾಚ್ಯ ಸಂಘರ್ಷ ಇತ್ಯರ್ಥಕ್ಕೆ ಮಧ್ಯಸ್ಥಿಕೆ ವಹಿಸಲು ಸಜ್ಜಾದ ಇಸ್ಲಾಮಾಬಾದ್ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಿರುವ ಡೌಗ್ಲಾಸ್ ಮ್ಯಾಕ್‌ಗ್ರೆಗರ್, ಪಾಕಿಸ್ತಾನದ ಆಂತರಿಕ ಅಸ್ಥಿರತೆ ಮತ್ತು ಆರ್ಥಿಕ ತೊಂದರೆಗಳು ಅದನ್ನು ಎಂದಿಗೂ ಒಂದು ವಿಶ್ವಾಸಾರ್ಹ ಮಧ್ಯವರ್ತಿಯನ್ನಾಗಿ ಮಾಡುವುದಿಲ್ಲ. ಅವರದ್ದೇ ದೇಶದಲ್ಲಿ ಶಾಂತಿ ಇಲ್ಲ, ಹಣವಿಲ್ಲ. ಹೀಗಿರುವಾಗ ಅವರು ಬೇರೆ ದೇಶಗಳ ಯುದ್ಧ ನಿಲ್ಲಿಸಲು ಹೇಗೆ ಸಾಧ್ಯ? ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ಪಾಕಿಸ್ತಾನಿಗಳು ಈ ಜಾಗತಿಕ ಯುದ್ಧದಲ್ಲಿ ಸಹಾಯ ಮಾಡಲು ಮುಂದಾಗುವುದು ಹೇಗಿದೆ ಅಂದರೆ, ಉರಿಯುತ್ತಿರುವ ಕಟ್ಟಡದಲ್ಲಿ ಸಿಲುಕಿರುವ ವ್ಯಕ್ತಿಯೊಬ್ಬ, ದಾರಿ ಹೋಕನಿಗೆ ಬಂದು ನನ್ನ ಮನೆಯಲ್ಲಿ ಬಾಡಿಗೆಗೆ ರೂಮ್ ಬೇಕಾ ಎಂದು ಕೇಳಿದಂತಿದೆ ಎಂದು ಡೌಗ್ಲಾಸ್ ಮ್ಯಾಕ್‌ಗ್ರೆರ್ಗ ವ್ಯಂಗ್ಯವಾಡಿದ್ದಾರೆ. ಅಲ್ಲದೇ ಪಾಕಿಸ್ತಾನದ ಮಧ್ಯಸ್ಥಿಕೆ ಪ್ರಸ್ತಾವನೆಗೆ ಇಸ್ರೇಲ್ ಒಪ್ಪಿಗೆ ಸೂಚಿಸಲು ಸಾಧ್ಯವೇ ಇಲ್ಲ ಎಂದು ಅವರು ಹೇಳಿದ್ದಾರೆ.

ಪಾಕಿಸ್ತಾನವನ್ನು ಇಸ್ರೇಲ್ ಒಂದು ತಟಸ್ಥ ರಾಷ್ಟ್ರವಾಗಿ ನೋಡುವುದೇ ಇಲ್ಲ. ಬದಲಾಗಿ ಅದನ್ನು ಬೆಂಜಮಿನ್ ನೆತನ್ಯಾಹು ಸರ್ಕಾರ ಸಮಸ್ಯೆಯ ಒಂದು ಭಾಗವಾಗಿ ಪರಿಗಣಿಸುತ್ತದೆ. ಹೀಗಿರುವಾಗ ಪಾಕಿಸ್ತಾನದ ಮಧ್ಯಸ್ಥಿಕೆ ಪ್ರಸ್ತಾವನೆಯನ್ನು ಅಮೆರಿಕವೂ ಒಪ್ಪೊಕೊಳ್ಳುವುದಿಲ್ಲ ಎಂಬುದು ಅಮೆರಿಕದ ರಕ್ಷಣಾ ತಜ್ಞರ ಖಚಿತ ಅಭಿಪ್ರಾಯವಾಗಿದೆ.

ಗಂಭೀರ ಮತ್ತು ಸೂಕ್ಷ್ಮ ಪರಿಸ್ಥಿತಿಯಲ್ಲಿ, ಭೌಗೋಳಿಕ ರಾಜಕೀಯದ ಜ್ಞಾನವೇ ಇಲ್ಲದ ಪಾಕಿಸ್ತಾನದಂತಹ ದೇಶಗಳು, ಮಧ್ಯಸ್ಥಿಕೆ ವಹಿಸುವುದಾಗಿ ಹೇಳುತ್ತಿರುವುದನ್ನು ಜಾಗತಿಕ ರಕ್ಷಣಾ ವಿಶ್ಲೇಷಕರು ಹಾಸ್ಯಾಸ್ಪದವಾಗಿ ನೋಡುತ್ತಿದ್ದಾರೆ. ತನ್ನ ದೇಶದ ಜನರಿಗೆ ಎರಡು ಹೊತ್ತಿನ ಊಟ ಕೊಡಲಾಗದ ಪಾಕ್ ಸರ್ಕಾರ, ಜಾಗತಿಕ ಯುದ್ಧವನ್ನು ನಿಲ್ಲಿಸಲು ಹೊರಟಿರುವುದು ಹಾಸ್ಯಾಸ್ಪದ ಅಸಂಬದ್ಧತೆಯೇ ಸರಿ. ಪಾಕಿಸ್ತಾನ ಮೊದಲು ತನ್ನ ಉರಿಯುತ್ತಿರುವ ಮನೆಯ ಬೆಂಕಿಯನ್ನು ನಂದಿಸಿಕೊಳ್ಳಲಿ. ಆಮೇಲೆ ಜಗತ್ತಿನ ಶಾಂತಿಯ ಬಗ್ಗೆ ಯೋಚಿಸಲಿ ಎಂಬ ಜಾಗತಿಕ ತಜ್ಞರ ಅಭಿಪ್ರಾಯಗಳಲ್ಲಿ ಸತ್ಯಾಂಶ ಇದೆ.

ಇನ್ನು ಮಧ್ಯಪ್ರಾಚ್ಯ ಸಂಘರ್ಷ ಕೊನೆಗಾಣಿಸಲು ಮಧ್ಯಸ್ಥಿಕೆವಹಿಸುವ ಅವಕಾಶವನ್ನು ಭಾರತ ಕಳೆದುಕೊಂಡಿದೆ ಎಂಬ ವಿಶ್ಲೇಷಣೆಗಳಿಗೆ ಸೂಕ್ತ ತಿರುಗೇಟು ನೀಡಿರುವ ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್, ಜಾಗತಿಕ ಶಕ್ತಿಗಳ ನಡುವೆ ಬ್ರೋಕರ್ ಪಾತ್ರವಹಿಸಲು ಭಾರತ ಪಾಕಿಸ್ತಾನವಲ್ಲ ಎಂದು ಸೂಚ್ಯವಾಗಿ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು.

# ಪಾರ್ಕಿಂಗ್ ಸ್ಥಳ ದುರ್ಬಳಕೆ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಸೂಚನೆ

• ಪ್ರಜೋದಯ ವರದಿ



**ಹಾಸನ:** ವಾಣಿಜ್ಯ ಕಟ್ಟಡಗಳು ಮತ್ತು ಆಸ್ಪತ್ರೆಗಳು ಕಡ್ಡಾಯವಾಗಿ ಪಾರ್ಕಿಂಗ್ ವ್ಯವಸ್ಥೆ ಇರಬೇಕು, ಪರವಾನಿಗೆ ನೀಡುವ ವೇಳೆಯಲ್ಲಿ ಕಡ್ಡಾಯ ಪರಿಶೀಲನೆ ಮಾಡಬೇಕು, ಪಾರ್ಕಿಂಗ್ ಅನುಮತಿ ಪಡೆದು ಇತರೆ ಬಳಕೆಗೆ ಮಾಡಿಕೊಂಡಿರುವ ಕಟ್ಟಡಗಳ ಮೇಲೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ ಎಸ್ ಲತಾ ಕುಮಾರಿ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರಸ್ತೆ ಸುರಕ್ಷತಾ ಪ್ರಾಧಿಕಾರದ ವಿಷಯದ ಬಗ್ಗೆ ಸಾರಿಗೆ, ಲೋಕೋಪಯೋಗಿ, ಪೊಲೀಸ್ ಮತ್ತು ಇತರೆ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ ನಡೆಸಿ ಮಾತನಾಡಿದ ಅವರು, ಎಲ್ಲಾ ಟ್ರ್ಯಾಕ್ಟರ್‌ಗಳಿಗೆ ರಿಫ್ಲೆಕ್ಷನ್ ಸ್ಟಿಕರ್ ಅಳವಡಿಕೆಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಕ್ರಮವಹಿಸಬೇಕು ಹಾಗೂ ಕಡ್ಡಾಯವಾಗಿ ಟ್ರ್ಯಾಕ್ಟರ್ ಚಾಲಕರಿಗೆ ತರಭೇತಿ ಆಯೋಜನೆ ಮಾಡಬೇಕು ಎಂದರು.

ಬಿಟ್ಟಗೌಡನಹಳ್ಳಿ ವೃತ್ತದಿಂದ ಅರಕಲಗೂಡುವರೆಗೆ ಖಾಸಗಿ ಸಂಸ್ಥೆಯ ಇಂಟರ್ ಟ್ರಾಫಿಕ್ ಮ್ಯಾನೇಜ್ಮೆಂಟ್ ಸೆಂಟರ್ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಪಾದಚಾರಿ ಮಾರ್ಗ ತೆರವುಗೊಳಿಸಿ ಸಾರ್ವಜನಿಕ ಅನುಕೂಲಕ್ಕೆ ಅವಕಾಶ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ನಿಧಿ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಜಯಣ್ಣ ಹಾಗೂ ಮತ್ತಿತರ ಅಧಿಕಾರಿಗಳು ಉಪಸ್ಥಿರಿದ್ದರು.

